ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ದಿಗ್ಗಜ ಬ್ಯಾಟರ್ ರಾಹುಲ್ ದ್ರಾವಿಡ್ ಅವರ ಮಗ ಅನ್ವಯ್ ಮತ್ತು ವಿರೇಂದ್ರ ಸೆಹ್ವಾಗ್ ಪುತ್ರ ಆರ್ಯವೀರ್ ಅವರನ್ನು 19 ವರ್ಷದೊಳಗಿನವರ ಭಾರತ ತಂಡಕ್ಕೆ ಆಯ್ಕೆ ಮಾಡಲಾಗಿದೆ.

28 ಆಗಸ್ಟ್, 2026 ಶುಕ್ರವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ -166 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629





ಟ್ಯಾಕ್ಸಿಕ್ : ಯಸ್ ವರ್ಸಸ್ ಯಸ್ » 2



ಮಾರಣಾಂತಿಕ ಕಾಯಿಲೆಗೆ ಆರೈಕೆ ಅತ್ಯವಶ್ಯಕ » 3



ಜಲ ಆಸ್ತಿ ಸಂರಕ್ಷಣೆಗೆ ಜಿಐಎಸ್ ಆಧರಿತ ಆ್ಯಪ್ » 4

## ಇಂದು 144ನೇ ಹುಣ್ಣಿಮೆ ಕಾರ್ಯಕ್ರಮ



• ಪ್ರಜೋದಯ ವರದಿ

**ಹಾಸನ:** ನಗರದ ಎಂ.ಜಿ. ರಸ್ತೆಯಲ್ಲಿರುವ ಆದಿಚುಂಚನಗಿರಿ ಶಾಖಾ ಮಠದಲ್ಲಿ ಆ.28ರ ಶುಕ್ರವಾರ ಸಂಜೆ 5.30ಕ್ಕೆ ಗುರು ತೋರಿದ ದಾರಿ ತಿಂಗಳ ಮಾಮನ ತೇರು 144ನೇ ಹುಣ್ಣಿಮೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಜನಪದ ಜಗತ್ತು ಎಂಬ ವಿಷಯ ಕುರಿತು ಜನಪದ ಗಾಯಕಿ, ಸಂಘಟಕಿ ಸವಿತಕ್ಕ ಉಪನ್ಯಾಸ ನೀಡಲಿದ್ದಾರೆ. ಆದಿಚುಂಚನಗಿರಿ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಸಾನಿಧ್ಯ ವಹಿಸಲಿದ್ದಾರೆ.

ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗ ವಹಿಸಿ ಕಾರ್ಯಕ್ರಮ ಯಶಸ್ವಿ ಗೊಳಿಸ ಬೇಕೆಂದು ಶ್ರೀ ಮಠದ ವ್ಯವಸ್ಥಾಪಕ ಚಂದ್ರಶೇಖರ್ ಅವರು ಕೋರಿದ್ದಾರೆ.

# 101 ತಾಲ್ಲೂಕು ಬರಪೀಡಿತ ಪಟ್ಟಿಗೆ

• ಪ್ರಜೋದಯ ವರದಿ

- 2,069 ಹಳ್ಳಿಗಳಲ್ಲಿ ಕುಡಿಯುವ ನೀರಿಗೆ ಸಮಸ್ಯೆ ಸಾಧ್ಯತೆ
- ಮುನ್ನೆಚ್ಚರಿಕೆ ಕ್ರಮ



**ಬೆಂಗಳೂರು:** ರಾಜ್ಯದಲ್ಲಿ ವಾಡಿಕೆಗಿಂತ ಭಾರೀ ಪ್ರಮಾಣದಲ್ಲಿ ಮಳೆ ಕೊರತೆಯಾಗಿದ್ದು, ತೀವ್ರ ಬರ ಪರಿಸ್ಥಿತಿ ಎದುರಾಗಿದೆ. ಮೊದಲ ಹಂತದಲ್ಲಿ 101 ತಾಲ್ಲೂಕುಗಳನ್ನು ಬರಪೀಡಿತ ಎಂದು ಸರ್ಕಾರ ಘೋಷಿಸಿದೆ.

89 ತಾಲ್ಲೂಕುಗಳಲ್ಲಿ ತೀವ್ರ ಬರ ಹಾಗು 12 ತಾಲ್ಲೂಕುಗಳಲ್ಲಿ ಸಾಧಾರಣ ಬರ ಪರಿಸ್ಥಿತಿ ಇದೆ. ಪರಿಸ್ಥಿತಿಯನ್ನು ಎದುರಿಸಲು ಸರ್ಕಾರ ಸಂಪೂರ್ಣ ಸನ್ನದ್ಧವಾಗಿದೆಯೆಂದು ಉಪಮುಖ್ಯಮಂತ್ರಿ ಪರಮೇಶ್ವರ್ ಅವರು ಗುರುವಾರ ತಿಳಿಸಿದರು.

ಈ ಬಾರಿ ಮಳೆ ಕೊರತೆಯಿಂದಾಗಿ ಕೃಷಿ ಕ್ಷೇತ್ರಕ್ಕೆ ಭಾರೀ ಪೆಟ್ಟು ಬಿದ್ದಿದೆ. ದಕ್ಷಿಣ ಒಳನಾಡಿನಲ್ಲಿ ಶೇ. 41, ಮಲೆನಾಡಿನಲ್ಲಿ ಶೇ. 35, ಉತ್ತರ ಒಳನಾಡಿನಲ್ಲಿ ಶೇ. 31 ಹಾಗು ಕರಾವಳಿ ಭಾಗದಲ್ಲಿ ಶೇ. 24 ರಷ್ಟು ಮಳೆ ಕೊರತೆಯಾಗಿದೆ ಎಂದು ಮಾಹಿತಿ ನೀಡಿದರು.

ಕಳೆದ ವರ್ಷ ರಾಜ್ಯದ ಜಲಾಶಯಗಳಲ್ಲಿ ಒಟ್ಟು 815 ಟಿಎಂಸಿ ಅಡಿ ನೀರು ಸಂಗ್ರಹವಿತ್ತು. ಆದರೆ, ಈ ಬಾರಿ ನೀರಿನ ಪ್ರಮಾಣ 684 ಟಿಎಂಸಿ ಅಡಿಗೆ ಕುಸಿದಿದೆ. ಪರಿಣಾಮ 2,069 ಗ್ರಾಮ ಪಂಚಾಯಿತಿಗಳಲ್ಲಿ ಮುಂದಿನ ದಿನಗಳಲ್ಲಿ ಕುಡಿಯುವ ನೀರಿನ ಅಭಾವ ಎದುರಾಗಲಿದೆ ಎಂದು ಅಂದಾಜಿಸಲಾಗಿದೆ. ಪ್ರಸ್ತುತ 758 ಗ್ರಾಮಗಳಿಗೆ 149 ಟ್ಯಾಂಕರ್ ಹಾಗು ಬಾಡಿಗೆಗೆ ಪಡೆದ ಖಾಸಗಿ ಕೊಳವೆ ಬಾವಿಗಳ ಮೂಲಕ ನೀರು ಪೂರೈಸಲಾಗುತ್ತಿದೆ. ಶೀಘ್ರದಲ್ಲೇ ಪ್ರಧಾನ ಮಂತ್ರಿ, ಗೃಹ ಸಚಿವರು ಮತ್ತು ಕೃಷಿ ಸಚಿವರನ್ನು ಭೇಟಿ ಮಾಡಿ ರಾಜ್ಯಕ್ಕೆ ಹೆಚ್ಚಿನ ನೆರವು ನೀಡುವಂತೆ ಕೋರಲಾಗುವುದೆಂದರು.

**ಪರಿಹಾರ ಕ್ರಮಗಳು**

ಪರಿಸ್ಥಿತಿ ಮತ್ತಷ್ಟು ಗಂಭೀರವಾಗುತ್ತಿರುವ ಹಿನ್ನಲೆಯಲ್ಲಿ ರಾಜ್ಯ ಸರ್ಕಾರವು ಆರ್ಥಿಕ ಹಾಗು ಭೌತಿಕ ಪರಿಹಾರ ಕ್ರಮಗಳನ್ನು ಕೈಗೊಂಡಿದೆ. ಕುಡಿಯುವ ನೀರಿನ ಯೋಜನೆಗಳಿಗೆ 306 ಕೋ.ರೂ. ಬಿಡುಗಡೆ, ಬೆಳೆ ವಿಮೆ ನೋಂದಣಿ ಗಡುವನ್ನು ಆ. 31ರ ವರೆಗೆ ವಿಸ್ತರಣೆ, ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗ ಸೃಷ್ಟಿಸಿ ವಲಸೆ ತಡೆಯಲು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅಡಿ 66.73 ಲಕ್ಷ ಮಾನವ ದಿನಗಳ ಉದ್ಯೋಗ ಸೃಷ್ಟಿಗೆ ನಿರ್ಧರಿಸಲಾಗಿದೆ.

131 ತಾಲ್ಲೂಕುಗಳಲ್ಲಿ ಅಂತರ್ಜಲ ಕುಸಿತ

ಮಳೆ ಕೊರತೆಯಿಂದಾಗಿ ರಾಜ್ಯದ ಪ್ರಮುಖ ಜಲಾಶಯಗಳಲ್ಲಿ ನೀರಿನ ಒಳಹರಿವು ಸಂಪೂರ್ಣ ಕ್ಷೀಣಿಸಿದ್ದು, ಪ್ರಸ್ತುತ 684 ಟಿಎಂಸಿ ನೀರು ಮಾತ್ರ ಸಂಗ್ರಹವಾಗಿದೆ. ರಾಜ್ಯದ 131 ತಾಲ್ಲೂಕುಗಳಲ್ಲಿ ಅಂತರ್ಜಲ ಮಟ್ಟ ತೀವ್ರವಾಗಿ ಕುಸಿದಿದೆ. ರಾಜ್ಯದ 2,021 ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಮುಂಬರುವ ದಿನಗಳಲ್ಲಿ ಕುಡಿಯುವ ನೀರಿನ ಭೀಕರ ಸಮಸ್ಯೆ ಎದುರಾಗುವ ಆತಂಕವಿದೆ. ರಾಜ್ಯದಲ್ಲಿ ಸದ್ಯ 151 ಲ. ಟನ್ ಮೇವು ಸಂಗ್ರಹವಿದ್ದು, ಇದು ಕೇವಲ 33 ವಾರಗಳಿಗೆ ಮಾತ್ರ ಸಾಕಾಗಲಿದೆ. 49 ತಾಲ್ಲೂಕುಗಳಲ್ಲಿ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಿದ್ದು, ಕೇವಲ 20 ವಾರಗಳಿಗಿಂತ ಕಡಿಮೆ ಅವಧಿಯ ಮೇವು ಮಾತ್ರ ಲಭ್ಯವಿದೆ.

ಬರ ಪರಿಹಾರ ಮತ್ತು ಮುನ್ನೆ

» ನಾಲ್ಕನೇ ಪುಟದಲ್ಲಿ

### ಕಾಟಾಚಾರಕ್ಕೆ ಬರಪೀಡಿತ ಪಟ್ಟಿ ಘೋಷಣೆ

ಜನ-ಜಾನುವಾರು ಸಂಕಷ್ಟಕ್ಕೆ ಸಿಲುಕಿದ ನಾಲ್ಕು ತಿಂಗಳ ನಂತರ ಎಚ್ಚೆತ್ತುಕೊಂಡಿರುವ ರಾಜ್ಯ ಸರ್ಕಾರ ಕಾಟಾಚಾರಕ್ಕೆ ತಾಲ್ಲೂಕು ಗಳ ಬರಪೀಡಿತ ಪಟ್ಟಿ ಘೋಷಿಸಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರು ಟೀಕಿಸಿದರು.

ಸುದ್ದಿಗೋಷ್ಟಿಯಲ್ಲಿ ಮಾತನಾಡಿದ ಅವರು, ಮುಂಗಾರು ಆರಂಭ ದಲ್ಲೇ ಬರದ ಛಾಯೆ ಆವರಿಸಿತ್ತು. ಅಂದೇ ಸರ್ಕಾರಕ್ಕೆ ಪತ್ರ ಬರೆದು ಬರಪೀಡಿತ ಪ್ರದೇಶಗಳ ಘೋಷಣೆ ಮಾಡಲು, ತುರ್ತು ನೆರವು ಒದಗಿ ಸಲು ಒತ್ತಾಯಿಸಿದ್ದೆ. ಸಾಕಷ್ಟು ತಡವಾಗಿ ಕ್ರಮ ಕೈಗೊಂಡಿದೆ. 175 ತಾಲ್ಲೂಕುಗಳಲ್ಲಿ ಬರ ಆವರಿಸಿ ದ್ದರೂ 89 ತಾಲ್ಲೂಕುಗಳನ್ನು ತೀವ್ರ ಹಾಗು 12 ತಾಲ್ಲೂಕುಗಳನ್ನು ಬರ ಪೀಡಿತ ಎಂದು ಗುರುತಿಸಲಾಗಿದೆ. ಖಜಾನೆಯಲ್ಲಿ ಹಣವಿಲ್ಲದೆ ಕಡಿಮೆ ತಾಲ್ಲೂಕುಗಳನ್ನು ಆಯ್ಕೆ ಮಾಡಿ ಕೊಂಡಿದೆ ಎಂದು ದೂರಿದರು.

ಕಲಬುರಗಿ ಸೇರಿ ರಾಜ್ಯದ ಹಲವು ಜಿಲ್ಲೆಗಳ ಜನರು ವಲಸೆ ಹೋಗಿದ್ದಾರೆ. ವಲಸೆ ತಡೆಗೆ ಸರ್ಕಾರ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಅವರ ಮಕ್ಕಳ ವಿದ್ಯಾಭ್ಯಾಸವೂ ಅರ್ಧಕ್ಕೆ ಸ್ಥಗಿತಗೊಂಡಿದೆ ಎಂದು ಆರೋಪಿಸಿದರು.

## ಹೇಮಾವತಿ ನೀರಾವರಿ ಸಲಹಾ ಸಮಿತಿ ಸಭೆ



• ಪ್ರಜೋದಯ ವರದಿ

**ಹಾಸನ:** ಕಾವೇರಿ ನೀರಾವರಿ ನಿಗಮ ನಿಯಮಿತ ವತಿಯಿಂದ ಹೇಮಾವತಿ ಜಲಾಶಯ ಯೋಜನೆಯ ನೀರಾವರಿ ಸಲಹಾ ಸಮಿತಿ ಸಭೆ ಗುರುವಾರ ಬೆಂಗಳೂರಿನ ವಿಕಾಸಸೌಧದಲ್ಲಿ ನಡೆಯಿತು.

ಉಪಮುಖ್ಯಮಂತ್ರಿ ಡಾ.ಜಿ. ಪರಮೇಶ್ವರ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ, ಸಂಸದ ಶ್ರೇಯಸ್ ಪಟೇಲ್ ಸೇರಿ ಹಾಸನ, ತುಮಕೂರು ಹಾಗು ಕೊಡಗು ಜಿಲ್ಲೆಗಳ ಶಾಸಕರು ಭಾಗ ವಹಿಸಿದ್ದರು. ಜಿಲ್ಲೆಯಿಂದ ಜೆಡಿಎಸ್ ಶಾಸಕ ಎ.ಮಂಜು, ಬಿಜೆಪಿ ಶಾಸಕ ಸಿಮೆಂಟ್ ಮಂಜು ಹಾಜರಿದ್ದರು.

ಸಭೆಯಲ್ಲಿ ಹೇಮಾವತಿ ಜಲಾಶಯದಲ್ಲಿರುವ ನೀರಿನ ಲಭ್ಯತೆ, ಅಚ್ಚುಕಟ್ಟು ಪ್ರದೇಶದ ನೀರಾವರಿ ವ್ಯವಸ್ಥೆ, ಜಲಾಶಯದ ನೀರಿನ ಸಮರ್ಪಕ ನಿರ್ವಹಣೆ ಹಾಗು ರೈತರಿಗೆ ಅಗತ್ಯವಿರುವ ನೀರಾವರಿ ಸೌಲಭ್ಯಗಳ ಕುರಿತು ಮಹತ್ವದ ಚರ್ಚೆ ನಡೆಯಿತು. ಹೇಮಾವತಿ ಜಲಾಶಯದ ನೀರನ್ನು ವೈಜ್ಞಾನಿಕವಾಗಿ ಹಾಗು ಸಮರ್ಪಕವಾಗಿ ಬಳಕೆ ಮತ್ತು ನಿರ್ವಹಣೆ ಮಾಡುವ ಮೂಲಕ ಅಚ್ಚುಕಟ್ಟು ಪ್ರದೇಶದ ರೈತರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವ ಕುರಿತು ಸಭೆಯಲ್ಲಿ ಒತ್ತು ನೀಡಲಾಯಿತು.

ಪ್ರಸ್ತುತ ನೀರಿನ ಲಭ್ಯತೆ ಹಾಗು ಮುಂದಿನ ದಿನಗಳಲ್ಲಿ ಕೈಗೊಳ್ಳಬೇಕಾದ ನೀರು ನಿರ್ವಹಣಾ ಕ್ರಮಗಳ ಬಗ್ಗೆಯೂ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಸಮಾಲೋಚನೆ ನಡೆಸಿದರು. ರೈತರ ಹಿತದೃಷ್ಟಿಯಿಂದ ನೀರಿನ ಬಳಕೆಯಲ್ಲಿ ಸಮತೋಲನ ಕಾಯ್ದುಕೊಳ್ಳುವ ಅಗತ್ಯವನ್ನು ಸಭೆಯಲ್ಲಿ ಪ್ರತಿಪಾದಿಸಲಾಯಿತು.

## ಭಾರತದ ಜನಸಂಖ್ಯೆ ಏರುತ್ತಿರುವುದು ಅಪಾಯಕಾರಿ ಬೆಳವಣಿಗೆ

### ರಾಷ್ಟ್ರದ ಅಭಿವೃದ್ಧಿಗೆ ಹೊಡೆತ | ಡಾ. ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ ಅಭಿಮತ



• ಪ್ರಜೋದಯ ವರದಿ

**ಹಾಸನ:** ಭಾರತದ ಭೂ ಪ್ರದೇಶ, ಆರ್ಥಿಕ ಸ್ಥಿತಿಗತಿಗೆ ಹೋಲಿಸಿದರೆ ಜನಸಂಖ್ಯೆ 70 ಕೋಟಿ ಇರಬೇಕಿತ್ತಾದರೂ 147 ಕೋಟಿ ದಾಟಿರುವುದರಿಂದ ಸರ್ವ ರೀತಿಯಲ್ಲೂ ಅಸಮಾನತೆ ಹೆಚ್ಚುತ್ತಿದೆ ಎಂದು ಕೆಂಗೇರಿ ವಿಶ್ವ ಒಕ್ಕಲಿಗರ ಮಠದ ಪೀಠಾಧಿಪತಿ ಡಾ. ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ ಅವರು ಹೇಳಿದರು.

ಗುರುವಾರ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಭಾಂಗಣದಲ್ಲಿ ನಡೆದ ವಿಶ್ವ ಜನಸಂಖ್ಯಾ ದಿನಾಚರಣೆ ಅಂಗವಾಗಿ ವಿಶೇಷ ಅರಿವು ಕಾರ್ಯಕ್ರಮ ಹಾಗು ಆಧ್ಯಾತ್ಮಿಕ ಚಿಂತನಾ ಸಭೆಯಲ್ಲಿ ಆಶೀರ್ವಚನ ನೀಡಿದ ಅವರು, ಯಾವುದೇ ದೇಶದಲ್ಲಿ ಉತ್ಪಾದಕ ಜನಸಂಖ್ಯೆ ಇರಬೇಕು. ಅನುತ್ಪಾದಕ ಜನರು ದೇಶಕ್ಕೆ ಶಾಪ. ಭಾರತದಲ್ಲಿ ಅನುತ್ಪಾದಕ ಜನಸಂಖ್ಯೆ ಹೆಚ್ಚಿರುವುದರಿಂದ ಆರ್ಥಿಕ, ಸಾಮಾಜಿಕ ವ್ಯವಸ್ಥೆ ಮೇಲೆ ದುಷ್ಪರಿಣಾಮ ಬೀರುತ್ತದೆ. ಏಷ್ಯಾ ಹಾಗು ಆಫ್ರಿಕಾ ಖಂಡದ ರಾಷ್ಟ್ರಗಳು ಅಧಿಕ ಜನಸಂಖ್ಯೆಯಿಂದ ತೊಂದರೆ ಅನುಭವಿಸುತ್ತಿವೆ. ಆದರೆ, ಯುರೋಪ್ ರಾಷ್ಟ್ರಗಳಲ್ಲಿ ಜನಸಂಖ್ಯೆ ಕಡಿಮೆ ಇರುವುದರಿಂದ ಅಲ್ಲಿ ಪ್ರಗತಿಯನ್ನು ಕಾಣಬಹುದಾಗಿದೆ ಎಂದರು.

ಭಾರತದಲ್ಲಿ ಜನಸಂಖ್ಯೆ ಹೆಚ್ಚಾಗಲು ಅನಕ್ಷರತೆ, ಬಡತನ ಮುಖ್ಯ ಕಾರಣ. ಆಧುನಿಕತೆ ಬೆಳೆದಂತೆ ಆರೋಗ್ಯ ಕ್ಷೇತ್ರದಲ್ಲಿ ಸುಧಾರಣೆ ಕಂಡು ಬಂದಿದೆಯಾದರೂ ಶೇ.80 ರಷ್ಟು ಜನರು ಆಹಾರ, ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಜನಸಂಖ್ಯೆ ಏರಿಕೆಗೆ ಕಡಿವಾಣ ಹಾಕದಿದ್ದರೆ ಆಪತ್ತು ಎದುರಾಗುವುದು ಖಚಿತ ವೆಂದರು.

**ತಪ್ಪು ಕಲ್ಪನೆಯಿಂದ ಹೊರ ಬನ್ನಿ**

ಕೆಲವರು ಜನಸಂಖ್ಯೆಯೇ ಧರ್ಮ ಅಂದುಕೊಂಡಿದ್ದಾರೆ. ಧರ್ಮ, ಜಾತಿ, ಸಂಸ್ಕೃತಿ, ಅಧಿಕಾರದ ಹೆಸರಿನಲ್ಲಿ ಜನಸಂಖ್ಯೆ ಹೆಚ್ಚಾಗಬೇಕೆಂದು ಬಯಸುತ್ತಾರೆ. ಅದು ಮಾನವ ಜನ್ಮಕ್ಕೆ ಒಳ್ಳೆಯದಲ್ಲ. ದೇಶದ ಹಿತದೃಷ್ಟಿಯಿಂದ ಜನಸಂಖ್ಯಾ ನಿಯಂತ್ರ ಕಡ್ಡಾಯವಾಗಿ ಅನುಷ್ಠಾನಗೊಳ್ಳಬೇಕೆಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭನ್ವಿತಾ ಅವರು ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಜನರಲ್ಲಿ ಅರಿವು ಉಂಟಾಗುತ್ತಿದೆ. ಪ್ರಸ್ತುತ ದಿನಗಳಲ್ಲಿ ಮಹಿಳೆಯರು ಪ್ರಜ್ಞಾವಂತರಾಗುತ್ತಿರುವುದು ಹೆಮ್ಮೆಯ ವಿಚಾರ. ಕರ್ನಾಟಕದ ಮಹಿಳೆಯರು ಆಡಳಿತ ಕ್ಷೇತ್ರದಲ್ಲಿ ಹೆಚ್ಚಿನ ಪ್ರಮಾಣದಲ್ಲಿರುವುದು ಆಶಾದಾಯಕ ಬೆಳವಣಿಗೆ ಎಂದರು.

» ನಾಲ್ಕನೇ ಪುಟದಲ್ಲಿ

### ಎಡಪಂಥೀಯರು ತುಂಬಾ ಅಪಾಯಕಾರಿ

ದೇಶದಲ್ಲಿ ಇತ್ತೀಚೆಗೆ ಜೆನ್ ಜಿ ಹೆಸರಿನಲ್ಲಿ ಮುಖ್ಯವಾಹಿನಿಗೆ ಬಂದಿರುವ ಯುವಕರು ಶುದ್ಧ ಸೋಮಾರಿಗಳು. ಅವರಿಂದ ದೇಶ ಉದ್ಧಾರ ಅಸಾಧ್ಯ. ಅವರೆಲ್ಲ ಎಡಪಂಥೀಯ ಚಿಂತನೆಗಳಿಂದ ಪ್ರಭಾವಿತರಾಗುತ್ತಿದ್ದಾರೆಂದು ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ ಅಭಿಪ್ರಾಯಪಟ್ಟರು.

ಎಡಪಂಥೀಯರು ತುಂಬಾ ಅಪಾಯಕಾರಿ. ತಾವು ಚೆನ್ನಾಗಿರಬೇಕೆಂದು ಮಾತ್ರ ಬಯಸುತ್ತಾರೆ, ಬಕೆಟ್ ಹಿಡಿದು ಬದುಕುವವರು ದೇಶಕ್ಕೆ ಮಾರಕ. ಭಾರತ ನಮಗೆ ಎಲ್ಲವನ್ನೂ ಕೊಟ್ಟಿದೆ, ಮೊದಲು ದೇಶವನ್ನು ಪ್ರೀತಿಸಬೇಕೆಂದರು.

# ಆಮೆಗತಿಯಲ್ಲಿ ಸಾಗಿದೆ ಅಮೃತ್ ಭಾರತ್ ಸ್ಟೇಷನ್

### ಹಾಸನ ರೈಲು ನಿಲ್ದಾಣ ಹೈಟೆಕ್‌ಗೆ ಕೂಡಿಬಾರದ ಕಾಲ | ಪ್ರಯಾಣಿಕರು ನಿತ್ಯ ಹೈರಾಣ

-ಮಲ್ಲಿಕಾರ್ಜುನ ಕೊಚ್ಚರಗಿ

• ಪ್ರಜೋದಯ ವರದಿ







**ಹಾಸನ:** ದೇಶದ ರೈಲ್ವೆ ಕ್ಷೇತ್ರಕ್ಕೆ ಹೈಟೆಕ್ ಸ್ಪರ್ಶ ಕಲ್ಪಿಸುವ ಉದ್ದೇಶದಿಂದ 2023ರಲ್ಲಿ ಕೇಂದ್ರ ಸರ್ಕಾರ ಜಾರಿಗೊಳಿಸಿದ ಅಮೃತ್ ಭಾರತ್ ಸ್ಟೇಷನ್ ಯೋಜನೆಗೆ ಆಯ್ಕೆಯಾದ ಹಾಸನ ರೈಲು ನಿಲ್ದಾಣ ಕಾಮಗಾರಿ ಆಮೆಗತಿಯಲ್ಲಿ ಸಾಗುತ್ತಿದ್ದು, ಪ್ರಯಾಣಿಕರ ಪಾಡು ಹೇಳತೀರದಾಗಿದೆ.

2023ರ ಆ.6ರಂದು ಪ್ರಧಾನಿ ನರೇಂದ್ರ ಮೋದಿ ಯೋಜನೆಗೆ ಚಾಲನೆ ನೀಡಿದರು. ನೈರುತ್ಯ ರೈಲ್ವೆ ಮೈಸೂರು ವಿಭಾಗದ ಅರಸೀಕೆರೆ, ಸಕಲೇಶಪುರ, ಹಾಸನ ರೈಲ್ವೆ ನಿಲ್ದಾಣಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಮೂರು ನಿಲ್ದಾಣಗಳಿಂದ ಒಟ್ಟು 43 ಕೋ.ರೂ. ಅನುದಾನ ಮೀಸಲಿಡಲಾಗಿದೆ. ಅರಸೀಕೆರೆ ರೈಲು ನಿಲ್ದಾಣದ ಕಾಮಗಾರಿ ನಿರೀಕ್ಷಿತ ವೇಗದಲ್ಲಿ ಸಾಗುತ್ತಿದೆಯಾದರೂ ಹಾಸನ ಮತ್ತು ಸಕಲೇಶಪುರದಲ್ಲಿ ಕೆಲಸಗಳು ಇನ್ನು ನಿಧಾನಗತಿಯಲ್ಲಿ ಸಾಗುತ್ತಿವೆ. ಹಾಸನ ರೈಲ್ವೆ ನಿಲ್ದಾಣ ಮುಂಭಾಗದ ವಿನ್ಯಾಸ ಬದಲಾಗಿದೆ ಎಂಬುದನ್ನು ಹೊರತುಪಡಿಸಿದರೆ ಉಳಿದ ಎಲ್ಲಾ ಕೆಲಸಗಳು ಹಾಗೆಯೇ ಇವೆ. ಎರಡು ವರ್ಷಗಳಲ್ಲಿ ಕಾಮಗಾರಿ ಮುಗಿಯಬೇಕಿತ್ತಾದರೂ ಸದ್ಯದ ಪರಿಸ್ಥಿತಿ ನೋಡಿದರೆ ಇನ್ನು ಮೂರು ವರ್ಷವಾದರೂ ಕೆಲಸ ಮುಗಿಯುವುದಿಲ್ಲ ಎನ್ನಲಾಗುತ್ತಿದೆ. ಕಾಮಗಾರಿ ಹಿನ್ನಲೆಯಲ್ಲಿ ನಿಲ್ದಾಣದ ಒಳಗಡೆ ಕಟ್ಟಡ ಸಾಮಾಗ್ರಿ ದಾಸ್ತಾನು ಮಾಡಿದ್ದು, ಪ್ರಯಾಣಿಕರು ಎಚ್ಚರಿಕೆಯಿಂದ ನಡೆದಾಡಬೇಕು. ಆಸನಗಳನ್ನು ತೆರವು ಮಾಡಿದ್ದರಿಂದ ಸಾರ್ವಜನಿಕರು ನಿಂತುಕೊಳ್ಳುವುದು ಅನಿವಾರ್ಯ. ಇನ್ನು ಮಳೆ ಬಂದರೆ ಆಶ್ರಯಕ್ಕೆ ಪರದಾಡುವ ಪರಿಸ್ಥಿತಿ ಇದೆ.

**ಅಮೃತ್ ಸ್ಟೇಷನ್ ವಿಶೇಷವೇನು?**

ಪ್ರಯಾಣಿಕ ಸೌಕರ್ಯ ಸುಧಾರಣೆ, ಗ್ರಾನೈಟ್ ನೆಲಹಾಸು, 12 ಮೀಟರ್ ಅಗಲದ ಪಾದಚಾರಿ ಮೇಲ್ಸೇತುವೆ, ಶೌಚಾಲಯ, ಸಿಸಿ ಟಿವಿ, ವೈಫೈ, 2 ಎಸ್ಕಲೇಟರ್, ಸ್ವಾಗತ ಹಾಗು ನಿರ್ಗಮನ ಕಮಾನು ಸೇರಿ 12 ಕೆಲಸಗಳನ್ನು ಯೋಜನೆಯಡಿ ಕೈಗೊಳ್ಳಲಾಗುತ್ತದೆ. ಅಲ್ಲದೆ ಈ ಯೋಜನೆಯಡಿ ಬೇರೆ ಬೇರೆ ನಿಲ್ದಾಣಗಳಲ್ಲಿ ಮೂಲ ಸೌಕರ್ಯ ಸುಧಾರಿಸಲು, ಸಂಪರ್ಕ ಸುಧಾರಣೆ, ಅಂಗವಿಕಲ ಪ್ರಯಾಣಿಕರಿಗೆ ಅನುಕೂಲ ಕಲ್ಪಿಸಲಾಗುತ್ತದೆ. ವಿಶ್ರಾಂತಿ ಕೊಠಡಿ, ಮಳಿಗೆಗಳು ಸೇರಿ ರೈಲ್ವೆ ನಿಲ್ದಾಣಕ್ಕೆ ಹೊಸ ಸ್ಪರ್ಶ ಕಲ್ಪಿಸುವುದು ಯೋಜನೆಯ ಉದ್ದೇಶ.

**ಪ್ರಯಾಣಿಕರಿಗೆ ನಿತ್ಯ ತೊಂದರೆ**

ಹಾಸನದಿಂದ ಮೈಸೂರು, ಬೆಂಗಳೂರು, ಅರಸೀಕೆರೆ ಕಡೆಗೆ

» ನಾಲ್ಕನೇ ಪುಟದಲ್ಲಿ

## ರೈಲಿಗೆ ತಲೆಕೊಟ್ಟು ಯುವಕ ಆತ್ಮಹತ್ಯೆ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ಚಲಿಸುತ್ತಿದ್ದ ರೈಲಿಗೆ ತಲೆಕೊಟ್ಟು ಯುವಕನೊಬ್ಬ ಆತ್ಮಹತ್ಯೆಗೆ ಶರಣಾಗಿರುವ ಘಟನೆ ತಾಲ್ಲೂಕಿನ ಹಿರೀಸಾವೆ ಸಮೀಪ ನಡೆದಿದೆ.

ಶ್ರವಣಬೆಳಗೊಳ ಹೋಬಳಿ ಜುಟ್ಟನಹಳ್ಳಿ ಗ್ರಾಮದ ಅಜಿತ್ (25) ಮೃತಪಟ್ಟಿದ್ದಾನೆ.ಹಾಸನ-ಬೆಂಗಳೂರು ರೈಲ್ವೆ ಮಾರ್ಗದ ಕಿರೀಸಾವೆ ಗಡಿ ಸಮೀಪ ಬುಧವಾರ ತಡರಾತ್ರಿ ಘಟನೆ ನಡೆದಿದೆ. ಸಾವಿಗೆ ನಿಖರ ಕಾರಣ ತಿಳಿದು ಬಂದಿಲ್ಲ. ಅಜಿತ್ ಅವರ ತಂದೆ ರಮೇಶ್ ಕೆಲ ವರ್ಷಗಳ ಹಿಂದೆ ಮೃತಪಟ್ಟಿದ್ದು, ತಾಯಿ ಜಯಲಕ್ಷ್ಮಮ್ಮ ಅಪಘಾತದಲ್ಲಿ ಕಾಲು ಮುರಿದುಕೊಂಡು ಅಸ್ವಸ್ಥರಾಗಿದ್ದಾರೆ. ಅರಸೀಕೆರೆ ರೈಲ್ವೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

## ಸಾಂಸ್ಕೃತಿಕ ಪರಂಪರೆ ಭವಿಷ್ಯದ ಪೀಳಿಗೆಗೆ ಉಳಿಯಲಿ

• ಪ್ರಜೋದಯ ವರದಿ





**ಚನ್ನರಾಯಪಟ್ಟಣ :** ನಾಡಿನ ಪಾರಂಪರಿಕ ಕಲೆ, ಜಾನಪದ ಹಾಗು ರಂಗಭೂಮಿ ಕಲೆಯನ್ನು ಮುಂದಿನ ಪೀಳಿಗೆಗೆ ಉಳಿಸಿ ಬೆಳೆಸುವಲ್ಲಿ ಯುವಕರ ಪಾತ್ರ ಮಹತ್ತರವಾದದ್ದು ಎಂದು ಸಂಸದ ಶ್ರೇಯಸ್ ಎಂ.ಪಟೇಲ್ ಅವರು ತಿಳಿಸಿದರು.

ಪಟ್ಟಣದ ಶ್ರೀ ಆದಿಚುಂಚನಗಿರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕುವೆಂಪು ವೇದಿಕೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಗುರುವಾರ ನಡೆದ ಯುವ ಸೌರಭ 2026-27 ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಯುವ ಪೀಳಿಗೆಯು ದೇಶದ ಸಂಸ್ಕೃತಿ, ಕಲೆ ಮತ್ತು ಜಾನಪದ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗುವಲ್ಲಿ ಇಂತಹ ವೇದಿಕೆಗಳು ಪ್ರಮುಖ ಪಾತ್ರ ವಹಿಸುತ್ತವೆ. ಯುವ ಸೌರಭದಂತಹ ವೇದಿಕೆಗಳು ಗ್ರಾಮೀಣ ಹಾಗು ಉದಯೋನ್ಮುಖ ಕಲಾವಿದರಿಗೆ ಸೂಕ್ತ ಪ್ರೋತ್ಸಾಹ ನೀಡಲಿವೆ. ಯುವ ಜನಾಂಗ ವ್ಯಾಸಂಗದ ಜೊತೆಗೆ ಸಾಂಸ್ಕೃತಿಕ ರಂಗದಲ್ಲೂ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕೆಂದರು.

» ನಾಲ್ಕನೇ ಪುಟದಲ್ಲಿ

### ಬಯಲುಸೀಮೆಯಲ್ಲಿ ಬರಘೋಷಣೆ | ಪಟ್ಟಿಯಿಂದ ಹೊರಗುಳಿದ ಆಲೂರು, ಬೇಲೂರು, ಸಕಲೇಶಪುರ

# ಕೈಕೊಟ್ಟ ಮುಂಗಾರು: ಜಿಲ್ಲೆಯ 5 ತಾಲ್ಲೂಕು ಬರಪೀಡಿತ

-ಕೆ.ಪಿ.ಸಾಗರ್ ರಾಜು

• ಪ್ರಜೋದಯ ವರದಿ



| ತಾಲ್ಲೂಕು | ಮಳೆಕೊರತೆ | ಬಿತ್ತನೆ |
|---|---|---|
| ಆಲೂರು | ಶೇ.36 | ಶೇ.97 |
| ಅರಕಲಗೂಡು | ಶ್ರೇ.57 | ಶೇ.60 |
| ಅರಸೀಕೆರೆ | ಶೇ.22 | ಶೇ.4 |
| ಬೇಲೂರು | ಶೇ.37 | ಶೇ.49 |
| ಚನ್ನರಾಯಪಟ್ಟಣ | ಶೇ.17 | ಶೇ.7 |
| ಹಾಸನ | ಶೇ.49 | ಶೇ.64 |
| ಹೊಳೆನರಸೀಪುರ | ಶೇ.53 | ಶೇ.38 |
| ಸಕಲೇಶಪುರ | 00 | ಶೇ.62 |

**ಹಾಸನ :** ಮುಂಗಾರು ಹಂಗಾಮಿನಲ್ಲಿ ಮಳೆ ಕೊರತೆ ಪರಿಣಾಮ ಜಿಲ್ಲೆಯ 8 ತಾಲ್ಲೂಕುಗಳ ಪೈಕಿ ಬಯಲು ಸೀಮೆಯ 5 ತಾಲ್ಲೂಕುಗಳನ್ನು ಬರಪೀಡಿತವೆಂದು ಘೋಷಿಸಲಾಗಿದೆ.

ರಾಜ್ಯ ಸರ್ಕಾರ ಗುರುವಾರ ಬಿಡುಗಡೆ ಮಾಡಿದ 101 ಬರಪೀಡಿದ ತಾಲ್ಲೂಕುಗಳ ಪಟ್ಟಿಯಲ್ಲಿ ಹಾಸನ ಜಿಲ್ಲೆಯ ಅರಸೀಕೆರೆ, ಅರಕಲಗೂಡು, ಚನ್ನರಾಯಪಟ್ಟಣ, ಹಾಸನ, ಹೊಳೆನರಸೀಪುರ ತಾಲ್ಲೂಕುಗಳು ಸ್ಥಾನ ಪಡೆದುಕೊಂಡಿವೆ. ಅರೆ ಮಲೆನಾಡು ಭಾಗವಾದ ಆಲೂರು, ಬೇಲೂರು, ಮಲೆನಾಡು ಭಾಗವಾದ ಸಕಲೇಶಪುರ ತಾಲ್ಲೂಕುಗಳನ್ನು ಪಟ್ಟಿಯಿಂದ ಕೈಬಿಡಲಾಗಿದೆ.

**ಜಿಲ್ಲೆಯಲ್ಲಿ ಶೇ.30 ರಷ್ಟು ಮಳೆ ಕೊರತೆ**

ಜ.1 ರಿಂದ ಆ.24ರವರೆಗೆ ಜಿಲ್ಲೆಯಲ್ಲಿ 790.6 ಮಿ.ಮೀ. ವಾಡಿಕೆ ಮಳೆಯಾಗಬೇಕಾಗಿತ್ತು. ಆದರೆ, ಈ ಅವಧಿಯಲ್ಲಿ ಕೇವಲ 507.1 ಮಿ.ಮೀ. ಮಳೆಯಾಗಿದೆ. ಪರಿಣಾಮ ಜಿಲ್ಲೆಯಲ್ಲಿ ಒಟ್ಟಾರೆ ಶೇ.30 ರಷ್ಟು ಮಳೆ ಕೊರತೆ ದಾಖಲಾಗಿದೆ. ಜಿಲ್ಲೆಯ ತಾಲ್ಲೂಕುಗಳ ಪೈಕಿ ಮಳೆ ಕೊರತೆಯ ತೀವ್ರತೆ ಅರಕಲ ಗೂಡಿನಲ್ಲಿ ಅತೀ ಹೆಚ್ಚು. ಇಲ್ಲಿ ವಾಡಿಕೆಗಿಂತ ಬರೋಬ್ಬರಿ ಶೇ.57ರಷ್ಟು ಮಳೆ ಕೊರತೆ ದಾಖಲಾಗಿದೆ. ನಂತರ ಹೊಳೆನರಸೀಪುರದಲ್ಲಿ ಶೇ.53, ಹಾಸನ ಶೇ.49, ಬೇಲೂರು ಶೇ.37, ಆಲೂರು ಶೇ.36, ಅರಸೀಕೆರೆ ಶೇ.22 ಹಾಗು ಚನ್ನರಾಯಪಟ್ಟಣದಲ್ಲಿ ಶೇ.17ರಷ್ಟು ಮಳೆ ಕೊರತೆ ಕಂಡುಬಂದಿದೆ. ಸಕಲೇಶಪುರ ತಾಲ್ಲೂಕಿನಲ್ಲಿ ವಾಡಿಕೆಗಿಂತ ಶೇ.5ರಷ್ಟು ಹೆಚ್ಚು ಮಳೆಯಾಗಿದೆ.

**ಶೇ.36.34ರಷ್ಟು ಮಾತ್ರ ಬಿತ್ತನೆ**

ಈ ವರ್ಷ ಜಿಲ್ಲೆಯಲ್ಲಿ 2,86,186 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಮಾಡುವ ಗುರಿ ನಿಗದಿಪಡಿಸಲಾಗಿತ್ತು. ಆದರೆ, ಆಗಸ್ಟ್ 24 ರವರೆಗೆ ಕೇವಲ 1,04,006 ಹೆಕ್ಟೇರ್ ಪ್ರದೇಶದಲ್ಲಿ ಮಾತ್ರ ಬಿತ್ತನೆ ನಡೆದಿದೆ. ಒಟ್ಟು ಗುರಿಯ ಪೈಕಿ ಶೇ.36.34ರಷ್ಟು ಮಾತ್ರ ಬಿತ್ತನೆ ಪೂರ್ಣಗೊಂಡಿದೆ. ಇನ್ನೂ 1,94,633 ಹೆಕ್ಟೇರ್ ಪ್ರದೇಶ ಬಿತ್ತನೆಯಾಗದೆ ಉಳಿದಿದೆ.

ಅರಸೀಕೆರೆ ತಾಲ್ಲೂಕಿನಲ್ಲಿ ಕೇವಲ ಶೇ.4.27 ರಷ್ಟು ಬಿತ್ತನೆ ನಡೆದಿದೆ. ಜಿಲ್ಲೆಯಲ್ಲಿಯೇ ಅತ್ಯಂತ ಕಡಿಮೆ ಪ್ರಗತಿ ದಾಖಲಾಗಿದೆ. ಚನ್ನರಾಯಪಟ್ಟಣದಲ್ಲಿ ಶೇ.7.16ರಷ್ಟು ಮಾತ್ರ ಬಿತ್ತನೆಯಾಗಿದೆ. ಆಲೂರು ಶೇ.97.75, ಹಾಸನ ಶೇ.64.56, ಸಕಲೇಶಪುರ ಶೇ.62.14, ಅರಕಲಗೂಡು ಶೇ.60.26, ಬೇಲೂರು ಶೇ.49.08,ಹೊಳೆನರಸೀಪುರ ಶೇ.38.11ರಷ್ಟು ಮಾತ್ರ ಬಿತ್ತನೆಯಾಗಿದೆ.

**ಆಲೂರು, ಬೇಲೂರಿನಲ್ಲೂ ಬರಸ್ಥಿತಿ**

ಬರಪೀಡಿತ ತಾಲ್ಲೂಕುಗಳ ಪಟ್ಟಿಯಲ್ಲಿ ಅರೆಮಲೆನಾಡು ಭಾಗವಾಗ ಬೇಲೂರು, ಆಲೂರು ತಾಲ್ಲೂಕುಗಳನ್ನು ಹೊರಗಿಡಲಾಗಿದೆ. ಬೇಲೂರು ತಾಲ್ಲೂಕಿನಲ್ಲಿ ಶೇ.37 ರಷ್ಟು, ಆಲೂರು ತಾಲ್ಲೂಕಿನಲ್ಲಿ ಶೇ.36 ರಷ್ಟು ಮಳೆ ಕೊರತೆಯಾಗಿದ್ದರೂ ಮಲೆನಾಡು ಭಾಗಕ್ಕೆ ಹೊಂದಿಕೊಂಡಿರುವ ಪ್ರದೇಶವನ್ನು ಪರಿಗಣನೆಗೆ ತೆಗೆದುಕೊಂಡು ಈ ಎರಡು ತಾಲ್ಲೂಕನ್ನು ಕಡೆಗಣಿಸಿರುವುದು ರೈತರ ಅಸಮಾಧಾನಕ್ಕೆ ಕಾರಣವಾಗಿದೆ. ಅರಸೀಕೆರೆ ಶೇ.22 ಹಾಗು ಚನ್ನರಾಯಪಟ್ಟಣದಲ್ಲಿ ಶೇ.17ರಷ್ಟು ಮಳೆ ಕೊರತೆಯಾಗಿದ್ದರೂ ಬರ ಪೀಡಿತ ಪಟ್ಟಿಗೆ ಸೇರಿಸಲಾಗಿದೆ. ಆದರೆ, ಆಲೂರು-ಬೇಲೂರು ತಾಲ್ಲೂಕನ್ನು ಏಕೆ ಕೈಬಿಡಲಾಗಿದೆ ಎಂದು ಕೃಷಿಕರು ಪ್ರಶ್ನಿಸಿದ್ದಾರೆ.

**ಬರ ಘೋಷಣೆಯೇ ಅಂತಿಮವಲ್ಲ**

ರಾಜ್ಯದಲ್ಲಿ ಪ್ರಸ್ತುತ 101 ತಾಲ್ಲೂಕುಗಳು ಗ್ರೌಂಡ್ ಟ್ರೂಥಿಂಗ್‌ಗೆ ಅರ್ಹತೆ ಪಡೆದಿವೆ ಎಂದ ಮಾತ್ರಕ್ಕೆ ಅವುಗಳನ್ನು ಅಂತಿಮವಾಗಿ ಬರಪೀಡಿತ ಎಂದು ಘೋಷಿಸಲಾಗಿದೆ ಎಂದಲ್ಲ. ಬರ ಅಧ್ಯಯನ ಪರಿಶೀಲನೆಯ ಮೂಲಕ ನೈಜ ಬೆಳೆ ಹಾನಿ ಮತ್ತು ಬರದ ತೀವ್ರತೆಯನ್ನು ದೃಢಪಡಿಸಲಾಗುತ್ತದೆ. ರಾಜ್ಯ ನೈಸರ್ಗಿಕ ವಿಕೋಪ ಮೇಲ್ವಿಚಾರಣಾ ಕೇಂದ್ರ ವಾರಕ್ಕೊಮ್ಮೆ ಪರಿಸ್ಥಿತಿಯನ್ನು ಮೌಲ್ಯಮಾಪನ ಮಾಡಲಿದೆ. ಸೆಪ್ಟೆಂಬರ್‌ನ ಮಳೆ ಹಾಗು ಬೆಳೆ ಸ್ಥಿತಿಯನ್ನು ಪರಿಗಣಿಸಿ ಹೊಸ ತಾಲ್ಲೂಕುಗಳನ್ನೂ ಗ್ರೌಂಡ್ ಟ್ರೂಥಿಂಗ್‌ಗೆ ಸೇರಿಸುವ ಸಾಧ್ಯತೆಯಿದೆ. ಆ ಪಟ್ಟಿಯಲ್ಲಿ ಬೇಲೂರು, ಆಲೂರು ತಾಲ್ಲೂಕುಗಳು ಸ್ಥಾನ ಪಡೆದುಕೊಳ್ಳುವ ಸಾಧ್ಯತೆ ಇದೆ.

### ಬೆಳೆ ನಷ್ಟವೇ ಅಂತಿಮ ಮಾನದಂಡ

ಕೇಂದ್ರದ ಬರ ನಿರ್ವಹಣಾ ಕೈಪಿಡಿ ಪ್ರಕಾರ, ಕ್ಷೇತ್ರ ಪರಿಶೀಲನೆಯಲ್ಲಿ ಶೇ.33 ಅಥವಾ ಅದಕ್ಕಿಂತ ಹೆಚ್ಚು ಬೆಳೆ ನಷ್ಟ ಕಂಡುಬಂದರೆ ಬರ ಘೋಷಣೆಗೆ ಪರಿಗಣಿಸಬಹುದು. ಶೇ.50ಕ್ಕಿಂತ ಹೆಚ್ಚು ಬೆಳೆ ನಷ್ಟ ಕಂಡುಬಂದರೆ ಅದನ್ನು ತೀವ್ರ ಬರ ಎಂದು ಪರಿಗಣಿಸುವ ಅವಕಾಶವಿದೆ. ಗ್ರೌಂಡ್ ಟ್ರೂಥಿಂಗ್‌ನಲ್ಲಿ ಶೇ.80ರಷ್ಟು ಪರಿಶೀಲನಾ ಮಾದರಿಗಳಲ್ಲಿ ಶೇ.50ಕ್ಕಿಂತ ಹೆಚ್ಚಿನ ಬೆಳೆ ನಷ್ಟ ದೃಢಪಟ್ಟರೆ, ಮಧ್ಯಮ ಬರವನ್ನು ತೀವ್ರ ಬರದ ವರ್ಗಕ್ಕೆ ಏರಿಸುವ ಅವಕಾಶವೂ ಇದೆ.

## ಆಸ್ತಿಗಾಗಿ ಸೊಸೆಯಿಂದ ಕಿರುಕುಳ-ಕೊಲೆ ಯತ್ನ: ಸಂತ್ರಸ್ತೆ ಚಂದ್ರಮ್ಮ ಆರೋಪ

• ಪ್ರಜೋದಯ ವರದಿ





**ಹಾಸನ:** ಮನೆ , ಜಮೀನಿಗಾಗಿ ಸೊಸೆ ನನಗೆ ಮನೆ ಬಿಟ್ಟು ಹೋಗುವಂತೆ ಕಿರುಕುಳ ನೀಡುವುದಲ್ಲದೇ, ಕೊಲೆಗೆ ಯತ್ನಿಸಿದ್ದು, ಪೊಲೀಸರು ರಕ್ಷಣೆ ನೀಡಬೇಕೆಂದು ನಗರದ ಗುಂಡೇಗೌಡನ ಕೊಪ್ಪಲು ನಿವಾಸಿ ಚಂದ್ರಮ್ಮ ಅವರು ಕಣ್ಣೀರಿಟ್ಟರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗುಂಡೇಗೌಡನಕೊಪ್ಪಲಿನಲ್ಲಿ 40 ವರ್ಷಗಳಿಂದ ವಾಸವಾಗಿದ್ದು, ನನಗೀಗ 70 ವರ್ಷ ವಯಸ್ಸಾಗಿದೆ. ಗಂಡ ಮೃತಪಟ್ಟ ನಂತರ ತಾವು ಮನೆಯ ಕೆಳ ಮಹಡಿಯಲ್ಲಿ ವಾಸವಾಗಿದ್ದು, ಮೊದಲ ಮಹಡಿಯಲ್ಲಿ ಪುತ್ರ ದಿನೇಶ್, ಸೊಸೆ ಶಶಿಕಲಾ ವಾಸಿಸುತ್ತಿದ್ದರು. ಕಳೆದ ಜುಲೈ 15 ಮಗ ದಿನೇಶ್ ಅನುಮಾನಾಸ್ಪದವಾಗಿ ಮೃತಪಟ್ಟ. ಮನೆಯ ದಾಖಲೆ ತಮ್ಮ ಹೆಸರಿನಲ್ಲಿದ್ದು, ಅದನ್ನು ತನ್ನ ಹೆಸರಿಗೆ ಮಾಡಿಕೊಡುವಂತೆ ಸೊಸೆ ಕಿರುಕುಳ ನೀಡುತ್ತಿದ್ದಾಳೆಂದರು.

ಮಗ ಬದುಕಿದ್ದಾಗ ಸರಿಯಾಗಿ ನೋಡಿಕೊಳ್ಳದ ಸೊಸೆ, ಈಗ ನನ್ನನ್ನು ಮನೆ ಬಿಟ್ಟು ಹೋಗುವಂತೆ ಕಿರುಕುಳ ನೀಡುತ್ತಿ ದ್ದಾಳೆ. ಕಣ್ಣಿಗೆ ಖಾರದ ಪುಡಿ ಎರಚಿ, ಚಾಕುವಿನಿಂದ ಇರಿದು ಕೊಲೆ ಮಾಡಲು ಯತ್ನಿಸಿದ್ದಾಳೆ. ಆಗಸ್ಟ್ 14 ರಂದು ರಾತ್ರಿ 9 ಗಂಟೆಯಲ್ಲಿ ನನ್ನ ಕುತ್ತಿಗೆ ಹಿಸುಕಿ, ಕೊಲೆ ಮಾಡಲು ಯತ್ನಿಸಿದ್ದಳು. ಹೇಗೋ ತಪ್ಪಿಸಿಕೊಂಡು ಮನೆಯೊಳಗೆ ಸೇರಿ ಬಾಗಿಲು ಹಾಕಿಕೊಂಡು ರಕ್ಷಣೆ ಪಡೆದಿದ್ದಾಗಿ ಹೇಳಿದರು.

ಈ ಸಂಬಂಧ ಬೆಂಗಳೂರಿನ ಅಟ್ರಾಸಿಟಿ ಸಮಿತಿ ಸದಸ್ಯರ ಗಮನಕ್ಕೆ ವಿಷಯ ತಂದಿದ್ದೇನೆ. ನನ್ನ ಹೆಸರಿನಲ್ಲಿರುವ ಎರಡು ಹಂತಸ್ತಿನ ಮನೆ, 30 ಗುಂಟೆ ಜಮೀನಿಗಾಗಿ ಈ ರೀತಿಯ ಕಿರುಕುಳ ನೀಡಲಾಗುತ್ತಿದೆ. ನನ್ನ ಪತಿ ಸ್ವಂತ ಸಂಪಾದನೆಯಿಂದ ನಿರ್ಮಿಸಿದ ಮನೆಯಲ್ಲಿ ನಾನು ಉಳಿಯಲು ಅವಕಾಶ ಕಲ್ಪಿಸಬೇಕು. ಪೊಲೀಸರು ಹಿರಿಯ ನಾಗರಿಕರ ರಕ್ಷಣೆಗೆ ಇರುವ ಕಾಯ್ದೆಯಡಿ ಪ್ರಕರಣ ದಾಖಲಿಸಿ ಸೂಕ್ತ ನ್ಯಾಯ ಒದಗಿಸಬೇಕೆಂದು ಮನವಿ ಮಾಡಿದರು. ಅಟ್ರಾಸಿಟಿ ಸಮಿತಿ ಸದಸ್ಯ ಲಕ್ಷ್ಮೀಪತಿ, ವಿಜಯಕುಮಾರ್ ಇದ್ದರು.

# ಟಾಕ್ಸಿಕ್ : ಯಶ್ ವರ್ಸಸ್ ಯಶ್!

## ತಂದೆ ರಾಯನ ಮೇಲೆ ಟಿಕೆಟ್‌ಗೆ ಕೊನೆಯ ಸೇಡು?



ರಾಕಿಂಗ್ ಸ್ಟಾರ್ ಯಶ್, ಬಹುನಿರೀಕ್ಷಿತ ಟಾಕ್ಸಿಕ್: ಎ ಫೇರಿ ಟೇಲ್ ಫಾರ್ ಗ್ರೋನ್-ಅಪ್ಸ್ ಚಿತ್ರದೊಂದಿಗೆ ಮತ್ತೆ ತೆರೆ ಮೇಲೆ ಬಂದಿದ್ದಾರೆ. ಗೀತು ಮೋಹನ್‌ದಾಸ್ ನಿರ್ದೇಶನದ ಈ ಚಿತ್ರವು (ಬುಧವಾರ, ಆಗಸ್ಟ್ 26) ಬಹುನಿರೀಕ್ಷಿತ ಥಿಯೇಟರ್ ಬಿಡುಗಡೆ ಕಂಡಿದೆ. ಎಲ್ಲರ ಗಮನ ಇದರ ಮೇಲಿದ್ದ ಕಾರಣ, ಚಿತ್ರದ ಮೇಲೆ ಭಾರೀ ನಿರೀಕ್ಷೆಗಳಿದ್ದವು. ಚಿತ್ರವು ಭಾರತದಾದ್ಯಂತ ದೊಡ್ಡ ಮಟ್ಟದಲ್ಲಿ ಟ್ರೆಂಡ್ ಆಗುತ್ತಿದ್ದರೂ, ಚಿತ್ರವು ಎಲ್ಲೆಡೆಯಿಂದ ಮಿಶ್ರ ಪ್ರತಿಕ್ರಿಯೆ ಎದುರಿಸುತ್ತಿದೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಟಾಕ್ಸಿಕ್ ಒಂದು ಪೀರಿಯಡ್ ಗ್ಯಾಂಗ್‌ಸ್ಟರ್ ಚಿತ್ರವಾಗಿದ್ದು, ತಂದೆ-ಮಗನ ಸೇಡಿನ ಕೋನವನ್ನು ಹೊಂದಿದೆ.

**ಟಾಕ್ಸಿಕ್: ಯಶ್ ಮತ್ತು ಕಿಯಾರಾ**

**ಅಡ್ವಾಣಿಯವರ ಆಪ್ತ ದೃಶ್ಯ**

ಟಾಕ್ಸಿಕ್ ಬಿಡುಗಡೆಗೂ ಮುನ್ನವೇ, ಯಶ್ ಮತ್ತು ಕಿಯಾರಾ ಅಡ್ವಾಣಿಯವರ ಆಪ್ತ ದೃಶ್ಯಗಳು ಗಮನ ಸೆಳೆದಿದ್ದವು, ಆನ್‌ಲೈನ್‌ನಲ್ಲಿ ಸಾಕಷ್ಟು ಚರ್ಚೆಗೆ ಕಾರಣವಾಗಿದ್ದವು.

ನಯನತಾರಾ, ಕಿಯಾರಾ ಅಡ್ವಾಣಿ, ತಾರಾ ಸುತಾರಿಯಾ, ಹುಮಾ ಖುರೇಷಿ ಮತ್ತು ರುಕ್ಮಿಣಿ ವಸಂತ್ ಸೇರಿದಂತೆ ಆಕರ್ಷಕ ನಟಿಯರ ತಂಡದೊಂದಿಗೆ, ಯಶ್ ಮತ್ತು ಕಿಯಾರಾ ಅವರ ಕಥಾಹಂದರ ಮತ್ತು ಅವರ ಪಾತ್ರಗಳು ದೊಡ್ಡ ನಿರೂಪಣೆಯಲ್ಲಿ ಹೇಗೆ ಹೊಂದಿಕೊಳ್ಳುತ್ತವೆ ಎಂಬ ಬಗ್ಗೆ ಅಭಿಮಾನಿಗಳು ವಿಶೇಷವಾಗಿ ಕುತೂಹಲ ಹೊಂದಿದ್ದರು.

ಇತ್ತೀಚೆಗೆ ಅಮ್ಮನಾದ ಕಿಯಾರಾ ಅಡ್ವಾಣಿ, ಯಶ್ ಅವರ ರಾಯನ ಎದುರು ನಾಡಿಯಾ ಪಾತ್ರವನ್ನು ನಿರ್ವಹಿಸಿದ್ದಾರೆ. ಟಾಕ್ಸಿಕ್ ಬಿಡುಗಡೆಯಾದ ನಂತರ, ಯಶ್-ಕಿಯಾರಾ ಅವರ ಆಪ್ತತೆಯ ದೃಶ್ಯ ಆನ್‌ಲೈನ್ ನಲ್ಲಿ ಸೋರಿಕೆಯಾಗಿತು.

ಕೆಲವು ಅಭಿಮಾನಿಗಳು ನಾಡಿಯಾ ಪಾತ್ರದಲ್ಲಿ ಕಿಯಾರಾ ಅವರ ಧೈರ್ಯಶಾಲಿ ಮತ್ತು ತೀಕ್ಷ್ಣವಾದ ಅಭಿನಯವನ್ನು ಶ್ಲಾಘಿಸಿದರೆ, ಕೆಲವು ಅಂತರ್ಜಾಲ ಬಳಕೆದಾರರು ಆಪ್ತ ದೃಶ್ಯಗಳು ಅನಗತ್ಯ ಮತ್ತು ಬಲವಂತದವು ಎಂದು ಭಾವಿಸಿದರು.



**ಅಂತಿಮವಾಗಿ ಟಿಕೆಟ್ ತಂದೆ ರಾಯನನ್ನು ಕೊಲ್ಲುತ್ತಾನಾ?**

ಈಗ ನಮಗೆಲ್ಲರಿಗೂ ತಿಳಿದಿರುವಂತೆ, ಯಶ್ ಟಾಕ್ಸಿಕ್ ಚಿತ್ರದಲ್ಲಿ ತಂದೆ ರಾಯ ಮತ್ತು ಮಗ ಟಿಕೆಟ್ ಎಂಬ ದ್ವಿಪಾತ್ರದಲ್ಲಿ ನಟಿಸಿದ್ದಾರೆ. ರಾಯ ತನ್ನ ಸಂಪತ್ತನ್ನು ರಕ್ಷಿಸಲು ಗೋವಾದ ಕೊಳೆಗೇರಿಗಳಲ್ಲಿ ನಾಡಿಯಾ ಮತ್ತು ಅವರ ನವಜಾತ ಮಗ ಟಿಕೆಟ್ ಅವರನ್ನು ಬಿಟ್ಟು ಹೋಗಿರುತ್ತಾನೆ. ನಾಡಿಯಾ ತನ್ನ ಮಗನನ್ನು ಏಕಾಂಗಿಯಾಗಿ ಬೆಳೆಸಿ, ರಾಯನನ್ನು ನಾಶಮಾಡಲು ಅವನನ್ನೇ ಒಂದು ಅಸ್ತ್ರವನ್ನಾಗಿ ಮಾಡುತ್ತಾಳೆ.

ವರ್ಷಗಳ ನಂತರ, ಟಿಕೆಟ್ ತನ್ನ ತಂದೆಯನ್ನು ಕೊಲ್ಲುವ ಮಹತ್ವದ ಉದ್ದೇಶದೊಂದಿಗೆ ರಾಯನ ಜೀವನಕ್ಕೆ ಮರಳುತ್ತಾನೆ - ಅವನು ಅವನನ್ನು ಸಂಪೂರ್ಣವಾಗಿ ನಾಶಮಾಡಲು ಬಯಸುತ್ತಾನೆ.

ಕ್ಲೈಮ್ಯಾಕ್ಸ್ ತಂದೆ ಮತ್ತು ಮಗನ ನಡುವಿನ ಕ್ರೂರ, ಆಕ್ಷನ್-ಪ್ಯಾಕ್ಡ್ ಮುಖಾಮುಖಿಗೆ ಕಾರಣವಾಗುತ್ತದೆ, ಅಂತಿಮವಾಗಿ ಟಿಕೆಟ್ ತನ್ನ ಸೇಡನ್ನು ಹೇಗೆ ತೀರಿಸಿಕೊಳ್ಳುತ್ತಾನೆ ಎಂಬುದನ್ನು ವೀಕ್ಷಿಸಲು ಚಿತ್ರವನ್ನೇ ನೋಡಬೇಕು.

ಆದರೆ ಟಿಕೆಟ್‌ನ ನಿರಂತರ ಇರಿತ ದಾಳಿಯಿಂದ ರಾಯ ಬದುಕುತ್ತಾನಾ? ಮತ್ತು ಸೇಡು ತೀರಿಸಿಕೊಳ್ಳುವ ಅನ್ವೇಷಣೆಯಲ್ಲಿ, ಟಿಕೆಟ್ ಅಂತಿಮವಾಗಿ ತಾನು ಅತಿ ಹೆಚ್ಚು ದ್ವೇಷಿಸುವ ವ್ಯಕ್ತಿಯಂತೆಯೇ - ತನ್ನ ತಂದೆಯಂತೆಯೇ ಆಗುತ್ತಾನಾ? ಯಶ್ ವಿಭಿನ್ನ ದ್ವಿ ಪಾತ್ರದಲ್ಲಿ ಹೇಗೆ ನಟಿಸಿದ್ದಾರೆ, ಚಿತ್ರಕಥೆ ಹೇಗಿದೆ? ಎಲ್ಲವನ್ನೂ ತೆರೆಯ ಮೇಲೆಯೇ ಆನಂದಿಸಬೇಕು.

ಅದೂ ಅಲ್ಲದೇ ಐವರು ನಟಿಯರ ಪಾತ್ರವೇನು ಎಂಬ ಕುತೂಹಲ ಎಲ್ಲರಿಗೂ ಇದ್ದೇ ಇದೆ. ಕಾಲಿವುಡ್‌ನಲ್ಲಿ ವಿಪರೀತ ಟೀಕೆ ಎದುರಿಸಿದರೆ, ಬೇರೆಡೆ ಈ ಚಿತ್ರಕ್ಕೆ ಮಿಶ್ರ ಪ್ರತಿಕ್ರಿಯೆ ಸಿಗುತ್ತಿದೆ. ಒಟ್ಟಿನಲ್ಲಿ ಯಶ್ ಅಭಿಮಾನಿಗಳಿಗೆ ಇಷ್ಟವಾಗುವ, ಶತ್ರುಗಳಿಗೆ ಇಷ್ಟವಾಗದಿರಲು ಮತ್ತಷ್ಟು ಕಾರಣ ಸಿಗೋ ಚಿತ್ರವೆಂದೇ ಸೋಷಿಯಲ್ ಮೀಡಿಯಾದಲ್ಲಿ ಚರ್ಚೆ ಯಾಗುತ್ತಿದೆ.

ಸಿಂಪಲ್ ಜೀವನಶೈಲಿಯಿಂದ ಈ ಮಟ್ಟಕ್ಕೆ ಬೆಳೆದ ಯಶ್ ಚಿತ್ರವನ್ನು ಗೆಲ್ಲಿಸಬೇಕೆಂಬ ಹಠ ಕನ್ನಡಿಗರಿಗೆ ಇರೋದು ಸುಳ್ಳಲ್ಲ.

# ತಮ್ಮ ವಿವಾಹಕ್ಕೆ ನಟ ದರ್ಶನ್‌ಗೆ ಆಹ್ವಾನ ನೀಡಲಿಲ್ವಾ? ಚಿಕ್ಕಣ್ಣ ಹೇಳಿದ್ದೇನು?

ಮೈಸೂರು ಮೂಲದ ಪಾವನಾ ಗೌಡ ಅವರೊಂದಿಗೆ ಚಿಕ್ಕಣ್ಣ ದಾಂಪತ್ಯ ಜೀವನಕ್ಕೆ ಕಾಲಿಡುತ್ತಿದ್ದು, ಮೈಸೂರಿನ ಸ್ಪೆಕ್ಟ್ರಮ್ ಹಾಲ್‌ನಲ್ಲಿ ಅದ್ದೂರಿಯಾಗಿ ಮದುವೆ ಕಾರ್ಯಕ್ರಮ ನಡೆಯಲಿದೆ.

ನಟ ದರ್ಶನ್‌ಗೆ ಮದುವೆ ಆಹ್ವಾನ ನೀಡದಿರುವ ವಿಚಾರ ಇದೀಗ ಹೆಚ್ಚು ಚರ್ಚೆಗೆ ಕಾರಣವಾಗಿದೆ. ಇದಕ್ಕೆ ಸ್ವತಃ ಚಿಕ್ಕಣ್ಣ ಸ್ಪಷ್ಟನೆ ನೀಡಿದ್ದಾರೆ.



ಸ್ಯಾಂಡಲ್‌ವುಡ್‌ನ ಜನಪ್ರಿಯ ಹಾಸ್ಯನಟ ಚಿಕ್ಕಣ್ಣ ಜೀವನದ ಹೊಸ ಅಧ್ಯಾಯಕ್ಕೆ ಸಜ್ಜಾಗಿದ್ದಾರೆ. ಹಲವು ವರ್ಷಗಳಿಂದ ತಮ್ಮ ವಿಭಿನ್ನ ಹಾಸ್ಯ ಶೈಲಿಯ ಮೂಲಕ ಕನ್ನಡ ಸಿನಿಪ್ರೇಕ್ಷಕರ ಮನಗೆದ್ದಿರುವ ಚಿಕ್ಕಣ್ಣ ಆಗಸ್ಟ್ 29 ಮತ್ತು 30ರಂದು ವೈವಾಹಿಕ ಜೀವನಕ್ಕೆ ಕಾಲಿಡಲಿದ್ದಾರೆ.

ಮೈಸೂರು ಮೂಲದ ಪಾವನಾ ಗೌಡ ಅವರೊಂದಿಗೆ ಚಿಕ್ಕಣ್ಣ ದಾಂಪತ್ಯ ಜೀವನಕ್ಕೆ ಕಾಲಿಡುತ್ತಿದ್ದು, ಮೈಸೂರಿನ ಸ್ಪೆಕ್ಟ್ರಮ್ ಹಾಲ್‌ನಲ್ಲಿ ಅದ್ದೂರಿಯಾಗಿ ಮದುವೆ ಕಾರ್ಯಕ್ರಮ ನಡೆಯಲಿದೆ. ಮದುವೆಗೆ ಚಿತ್ರರಂಗದ ಗಣ್ಯರು, ರಾಜಕೀಯ ಮುಖಂಡರು ಸೇರಿದಂತೆ ಹಲವು ಪ್ರಮುಖರಿಗೆ ಈಗಾಗಲೇ ಆಹ್ವಾನ ನೀಡಲಾಗಿದೆ.

ಆದರೆ ನಟ ದರ್ಶನ್ ಗೆ ಮದುವೆ ಆಹ್ವಾನ ನೀಡದಿರುವ ವಿಚಾರ ಇದೀಗ ಹೆಚ್ಚು ಚರ್ಚೆಗೆ ಕಾರಣವಾಗಿದೆ. ಇದಕ್ಕೆ ಸ್ವತಃ ಚಿಕ್ಕಣ್ಣ ಸ್ಪಷ್ಟನೆ ನೀಡಿದ್ದಾರೆ. ಚಿಕ್ಕಣ್ಣ ಮದುವೆಗೆ ದರ್ಶನ್ ನ ಆಹ್ವಾನಿಸಲಾಗಿಲ್ಲ ಎಂಬ ವಿಚಾರ ಇದೀಗ ಅಭಿಮಾನಿಗಳಲ್ಲಿ ಕುತೂಹಲ ಮೂಡಿಸಿದೆ.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಚಿಕ್ಕಣ್ಣ, ದರ್ಶನ್ ಅವರ ಪ್ರಕರಣದಲ್ಲಿ ನಾನು ಸಾಕ್ಷಿ ಆಗಿರುವುದರಿಂದ ಅವರು ಜೈಲಲ್ಲಿ ಇಲ್ಲದಿದ್ದರು ಅವರನ್ನು ಕರೆಯುವಂತಿಲ್ಲ. ಅವರೂ ಬರುತ್ತಿರಲಿಲ್ಲ. ಹೀಗಾಗೇ ಅವರನ್ನು ಕರೆದಿಲ್ಲ. ಪ್ರಕರಣದಲ್ಲಿ ಸಾಕ್ಷಿ ಆಗಿರುವುದರಿಂದ ನಾನು ಅವರ ಬಗ್ಗೆ ಇಷ್ಟೇ ಹೇಳಲು ಸಾಧ್ಯ ಎಂದಿದ್ದಾರೆ.

ಯಶ್ ಹಾಗೂ ಟಾಕ್ಸಿಕ್ ಸಿನಿಮಾ ಬಗ್ಗೆ ಮಾತನಾಡಿದ ಚಿಕ್ಕಣ್ಣ, ಯಶ್ ಅವರನ್ನು ನಾನು ಅಣ್ಣ ಎಂದು ಕರೆಯುತ್ತೇನೆ. ಅವರ ಟಾಕ್ಸಿಕ್ ಸಿನಿಮಾವನ್ನು ಮದುವೆ ಆದ ಮೇಲೆ ಹೋಗಿ ನೋಡುತ್ತೇನೆ ಎಂದಿದ್ದಾರೆ. ಇನ್ನು, ಮೈಸೂರಿನ ಸ್ಪೆಕ್ಟ್ರಮ್ ಹಾಲ್‌ನಲ್ಲಿ ನಟ ಚಿಕ್ಕಣ್ಣ ಹಾಗೂ ಪಾವನಾ ಗೌಡ ಅವರ ಮದುವೆ ನಡೆಯಲಿದೆ. ಈ ವಿವಾಹ ಸಮಾರಂಭದಲ್ಲಿ ಕನ್ನಡದ ನಟ ನಟಿಯರು ಭಾಗಿಯಾಗಲಿದ್ದಾರೆ.

# ಬಾಲಿವುಡ್‌ನ ಹೈವಾನ್ ಸೆಪ್ಟೆಂಬರ್ 11ರಂದು ತೆರೆಗೆ



ಅಕ್ಷಯ್ ಕುಮಾರ್ ಮತ್ತು ಸೈಫ್ ಅಲಿ ಖಾನ್ ಪ್ರಮುಖ ಪಾತ್ರಗಳಲ್ಲಿ ನಟಿಸಿರುವ ಬಾಲಿವುಡ್ ಚಿತ್ರ ಹೈವಾನ್ ಸೆಪ್ಟೆಂಬರ್ 11ರಂದು ತೆರೆಗೆ ಬರಲಿದೆ. ಇಬ್ಬರು ನಟರು ಮುಖಾಮುಖಿಯಾಗುವ ಚಿತ್ರದ ಟ್ರೇಲರ್ ಇತ್ತೀಚೆಗೆ ಬಿಡುಗಡೆಯಾಗಿದೆ.

ಪ್ರಿಯದರ್ಶನ್ ಅವರ ಮುಂಬರುವ ಚಿತ್ರ ಹೈವಾನ್ ನ ಮೊದಲ ನೋಟ ಬುಧವಾರ ಬಿಡುಗಡೆಯಾಯಿತು, ಇದರಲ್ಲಿ ಅಕ್ಷಯ್ ಕುಮಾರ್ ಮತ್ತು ಸೈಫ್ ಅಲಿ ಖಾನ್ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಹೆಚ್ಚಿನದನ್ನು ಬಿಟ್ಟುಕೊಡದೆ, ಅಕ್ಷಯ್ ಬಿಡುಗಡೆ ದಿನಾಂಕವನ್ನು ಪುನರುಚ್ಚರಿಸುವಾಗ ಚಿತ್ರದ ಕಥೆ ಮತ್ತು ಅವರ ಪಾತ್ರಗಳನ್ನು ಲೇವಡಿ ಮಾಡಿದರು.

ಚಿತ್ರದಲ್ಲಿ ಅಕ್ಷಯ್ ಕುಮಾರ್ ಖಳನಾಯಕನಾಗಿ, ಸೈಫ್ ಅಲಿ ಖಾನ್ ಅಂಧನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಬೊಮನ್ ಇರಾನಿ ನ್ಯಾಯಾಧೀಶರಾಗಿ, ಸಯಾಮಿ ಖೇರ್ ಪೊಲೀಸ್ ಅಧಿಕಾರಿಯಾಗಿ ನಟಿಸಿದ್ದಾರೆ. ಶ್ರಿಯಾ ಪಿಲ್ಗಾಂವ್ಕರ್ ಮತ್ತು ಶಾರಿಬ್ ಹಶ್ಮಿ ಇತರ ಪ್ರಮುಖ ಪಾತ್ರಗಳಲ್ಲಿದ್ದು, ಮೋಹನ್‌ಲಾಲ್ ವಿಶೇಷ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ಕುತೂಹಲಕಾರಿ ಕಥಾಹಂದರ ಹೊಂದಿರುವ ಈ ಚಿತ್ರದಲ್ಲಿ ಅಕ್ಷಯ್ ಕುಮಾರ್ ಮತ್ತು ಸೈಫ್ ಅಲಿ ಖಾನ್ ಅವರ ಮುಖಾಮುಖಿಯೇ ಪ್ರಮುಖ ಆಕರ್ಷಣೆ. ನಿರ್ದೇಶಕ ಪ್ರಿಯದರ್ಶನ್ ಅವರ ನಿರೂಪಣೆ ಹಾಗೂ ಹಿನ್ನೆಲೆ ಸಂಗೀತ ಈ ಮುಖಾಮುಖಿಯ ತೀವ್ರತೆಯನ್ನು ಮತ್ತಷ್ಟು ಹೆಚ್ಚಿಸಲಿದೆ ಎಂದು ಚಿತ್ರತಂಡ ತಿಳಿಸಿದೆ.

ಕೆಂಪು ಬಣ್ಣದ ಪೋಸ್ಟರ್‌ನಲ್ಲಿ ಸ್ಮಶಾನದಲ್ಲಿ ವ್ಯಕ್ತಿಯೊಬ್ಬ ಸುತ್ತು ಕರಕಲಾಗುತ್ತಿರುವಾಗ ಅಕ್ಷಯ್ ಬೆದರಿಕೆಯೊಂದಿಗೆ ನ'ಗ'ಂತಿ ರ'ಂವ'ದ'ನ'ಂ ತೋರಿಸಿದರೆ, ಸೈಫ್ ಅವರ ಹಳದಿ ಬಣ್ಣದ ಪೋಸ್ಟರ್‌ನಲ್ಲಿ ಅವರು ಗಮನಹರಿಸಿದಂತೆ ಕಾಣುತ್ತಿದ್ದಾರೆ. ಅವರಿಬ್ಬರೂ ಒಟ್ಟಿಗೆ ಇರುವ ಪೋಸ್ಟರ್ ನಲ್ಲಿ ಮಗುವಿನ ಆಟದ ಕರಡಿಯನ್ನು ಹಿಡಿದಿರುವ ಮಗುವೂ ಇದೆ, ಅದು ಬಹುಶಃ ಕಥೆಯ ಪ್ರಮುಖ ಅಂಶವಾಗಿದೆ.




ಕೆವಿಎನ್ ಪ್ರೊಡಕ್ಷನ್ಸ್ ಮತ್ತು ಥೆಸ್ಪಿಯನ್ ಫಿಲ್ಮ್ಸ್ ಬ್ಯಾನರ್‌ನಡಿ ವೆಂಕಟ್ ಕೆ. ನಾರಾಯಣ ಮತ್ತು ಶೈಲಜಾ ದೇಸಾಯಿ ಫೆನ್ ಚಿತ್ರವನ್ನು ನಿರ್ಮಿಸಿದ್ದಾರೆ.

# ಸ್ಯಾಂಡಲ್‌ವುಡ್‌ಗೆ ಮರಳಿದ ಲಕ್ಷ್ಮೀ

## ಚಿಂಟು ಸನ್ ಆಫ್ ವಿಶಾಲಾಕ್ಷಿ ಚಿತ್ರದಲ್ಲಿ ನಟಿಸುತ್ತಿರುವ ಪಂಚಭಾಷಾ ತಾರೆ

### ಪ್ರಮುಖ ಮುಖ್ಯಾಂಶಗಳು

- ಕನ್ನಡ ಸೇರಿ ಪರಭಾಷೆಯ 700ಕ್ಕೂ ಅಧಿಕ ಸಿನಿಮಾಗಳಲ್ಲಿ ನಟಿಸಿರುವ ಹಿರಿಯ ನಟಿ
- 2002ರ ಬಳಿಕ ಮತ್ತೆ ಸ್ಯಾಂಡಲ್ ವುಡ್‌ಗೆ ಮರಳಿದ ಲಕ್ಷ್ಮೀ
- ಚಿಂಟು ಸನ್ ಆಫ್ ವಿಶಾಲಾಕ್ಷಿ ಚಿತ್ರದಲ್ಲಿ ಪ್ರಕಾಶ್ ಬೆಳವಾಡಿಗೆ ತಾಯಿಯಾದ ನಟಿ

ಕನ್ನಡ ಸೇರಿ ಪರಭಾಷೆಯ 700ಕ್ಕೂ ಅಧಿಕ ಸಿನಿಮಾಗಳಲ್ಲಿ ನಟಿಸಿದ ಖ್ಯಾತಿ ಹಿರಿಯ ನಟಿಗೆ ಲಕ್ಷ್ಮೀ ಸಲ್ಲುತ್ತದೆ. ತಮ್ಮ ವೃತ್ತಿ ಜೀವನದಲ್ಲಿ 30 ಸಾವಿರಕ್ಕೂ ಅಧಿಕ ಕಾಲ್ ಶೀಟ್‌ನಲ್ಲಿ ಕೆಲಸ ಮಾಡಿದ ಹಿರಿಮೆ ಅವರಿಗಿದೆ. ಇಂತಹ ಪಂಚಭಾಷಾ ತಾರೆ ಇದೀಗ ನಾಲ್ಕು ವರ್ಷಗಳ ಬಳಿಕ ಮತ್ತೆ ಸ್ಯಾಂಡಲ್‌ವುಡ್‌ಗೆ ಮರಳಿದ್ದಾರೆ. ತ್ರಿಕೋನ (2022) ಅವರು ಅಭಿನಯಿಸಿದ್ದ ಕೊನೆಯ ಸಿನಿಮಾ. ಇದೀಗ ಯುವ ನಿರ್ದೇಶಕಿ ಮಾನಸಾ ಯು. ಶರ್ಮಾ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ಆ್ಯಕ್ಷನ್-ಕಟ್ ಹೇಳುತ್ತಿರುವ ಚಿಂಟು ಸನ್ ಆಫ್ ವಿಶಾಲಾಕ್ಷಿ ಮೂಲಕ ಕನ್ನಡಕ್ಕೆ ಮತ್ತೆ ಮರಳುತ್ತಿದ್ದಾರೆ. ಕಳೆದ ಒಂಬತ್ತು ವರ್ಷಗಳಿಂದ ಕಿರುಚಿತ್ರ, ಜಾಹೀರಾತು ಸೇರಿ ವಿವಿಧ ವಿಭಾಗದಲ್ಲಿ ಕೆಲಸ ಮಾಡಿರುವ ಅವರು ಇದೇ ಮೊದಲ ಬಾರಿಗೆ ನಿರ್ದೇಶನಕ್ಕಿಳಿದಿದ್ದಾರೆ.

ಚಿಂಟು ಸನ್ ಆಫ್ ವಿಶಾಲಕ್ಷಿ ಚಿತ್ರವು 60 ವರ್ಷದ ಮಗ ಹಾಗೂ ತಾಯಿ ನಡುವಿನ ಸಂಬಂಧ ಸಾರುವ ಚಿತ್ರವಾಗಿದ್ದು, ಪ್ರಕಾಶ್ ಬೆಳವಾಡಿ ಮಗನಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಈಗಾಗಲೇ ಪ್ರಿ-ಪ್ರೊಡಕ್ಷನ್ ಕಾರ್ಯಗಳು ಪೂರ್ಣಗೊಂಡಿದ್ದು, ಅಕ್ಟೋಬರ್ ನಲ್ಲಿ ಶೂಟಿಂಗ್ ಆರಂಭಿಸಲಿದೆ. ನಿರ್ದೇಶಕಿ ಮಾನಸಾ, ಬಹುತೇಕ ಸಿನಿಮಾಗಳಲ್ಲಿ ಔಟ್ ಆಫ್ ಬಾಕ್ಸ್ ಅನಿಸುವ ಕಥೆಗಳನ್ನು ನಿರೀಕ್ಷಿಸುತ್ತಾರೆ. ಆದರೆ, ಇದು ಹಾಗಿಲ್ಲ. ಇದು ಎಲ್ಲರ ಮನೆಯಲ್ಲಿ ನಡೆಯುವ ಕಥೆ. ಒಮ್ಮೆ ನಾನು ಧಾರ್ಮಿಕ ಕ್ಷೇತ್ರಕ್ಕೆ ಹೋಗಿದ್ದೆ. 60 ವರ್ಷದ ಮಗನನ್ನು ತಾಯಿಯೊಬ್ಬರು ಅಲ್ಲಿಗೆ ಕರೆದುಕೊಂಡು ಬಂದಿದ್ದರು. ಅವರನ್ನು ವಿಚಾರಿಸಿದಾಗ ಹಲವು ವಿಷಯಗಳು ಗೊತ್ತಾದವು. ಆಗಲೇ ನನಗೆ ಇದನ್ನು ಸಿನಿಮಾ ಮಾಡಬಹುದು ಅಂತನಿಸಿ, ಕಥೆ ಬರೆಯಲು ಮುಂದಾದೆ. ಬೆಂಗಳೂರಿನ ಮಲ್ಲೇಶ್ವರಂನಲ್ಲಿ ನಡೆಯುವ ಕಥೆ ಇದು. ಬಳಿಕ ಕಾಶಿ, ಹೃಷಿಕೇಶಕ್ಕೆ ಹೋಗುತ್ತದೆ. ಆದಷ್ಟು ನೈಜವಾಗಿ ಶೂಟಿಂಗ್ ಮಾಡಲಿದ್ದೇವೆ ಎಂದ'ಂ ಮಾಹಿತಿ ನೀಡುತ್ತಾರೆ. ಲಕ್ಷ್ಮೀ, ಪ್ರಕಾಶ್ ಬೆಳವಾಡಿ ಜತೆ ಆಚಾರ್ ಆ್ಯಂಡ್ ಕೋ ಖ್ಯಾತಿಯ ಹರ್ಷಿಲ್ ಕೌಶಿಕ್, ಶಾಲಿನಿ ಸತ್ಯನಾರಾಯಣ, ರೋಹಿತ್ ಶ್ರೀನಾಥ್, ಶ್ರೀನಿವಾಸ ಪ್ರಭು ತಾರಾಗಣದಲ್ಲಿದ್ದಾರೆ.






# ಜೆನ್ ಜೀಗಳಿಗೆ ಇಂತಹ ಸಿನಿಮಾಗಳೆಂದರೆ ತುಂಬಾ ಇಷ್ಟವಂತೆ

## ಮನರಂಜನಾ ಜಗತ್ತಿನಲ್ಲೂ ಯುವ ಪೀಳಿಗೆಯದ್ದೇ ಹವಾ!

ಸಿನಿಮಾ ಜಗತ್ತು ವೀಕ್ಷಕರ ಅಭಿರುಚಿ ಹಾಗೂ ಕಾಲಕ್ಕೆ ತಕ್ಕಂತೆ ವೇಗವಾಗಿ ಬದಲಾಗುತ್ತಿದ್ದು, ಇಂದಿನ ಮನರಂಜನಾ ಜಗತ್ತಿನಲ್ಲಿ ಜೆನ್ ಜೀ ಯುವ ಪೀಳಿಗೆಯದ್ದೇ ಎಲ್ಲೆಡೆ ಹವಾ ಮುಂದುವರಿದಿದೆ.

ಒಂದು ಕಾಲದಲ್ಲಿ ಕೇವಲ ಫೈಟ್ಸ್, ಲವ್ ಸಾಂಗ್ ಹಾಗೂ ಕಾಮಿಡಿ ಇದ್ದರೆ ಸಾಕು ಚಿತ್ರಗಳು ಸೂಪರ್ ಹಿಟ್ ಆಗುತ್ತಿದ್ದವು. ಆದರೆ, ಇಂದಿನ ಸ್ಮಾರ್ಟ್ ಪ್ರೇಕ್ಷಕ ವರ್ಗವು ಕೇವಲ ಮೇಲ್ಮೈ ಮನರಂಜನೆಗೆ ತೃಪ್ತಿಪಡದೆ, ಸಿನಿಮಾದ ಕಥೆಯನ್ನು ಅತ್ಯಂತ ಆಳವಾಗಿ ವಿಶ್ಲೇಷಿಸುತ್ತಿದೆ.

ಹೌದು, ಕಥೆಯಲ್ಲಿ ಹೊಸತನವಿದೆಯೇ, ಪಾತ್ರಗಳು ರಿಯಲಿಸ್ಟಿಕ್ ಆಗಿ ಮೂಡಿಬಂದಿವೆಯಾ? ಅಥವಾ ಕಥೆ ತಮ್ಮ ನೈಜ ಜೀವನದೊಂದಿಗೆ ಕನೆಕ್ಟ್ ಆಗುತ್ತದೆಯೇ? ಎಂದು ಸೂಕ್ಷ್ಮವಾಗಿ ಗಮನಿಸುತ್ತಿದ್ದಾರೆ.

ಹಾಗಾದರೆ, ಇಂದಿನ ಜೆನ್ ಜೀ ಪ್ರೇಕ್ಷಕರನ್ನು ಮಂತ್ರಮುಗ್ಧಗೊಳಿಸುವ ಸಿನಿಮಾಗಳಲ್ಲಿ ಇರಬೇಕಾದ ಆಕರ್ಷಕ ವೈಶಿಷ್ಟ್ಯಗಳು ಮತ್ತು ಬದಲಾದ ಟ್ರೆಂಡ್ ಏನು ಎಂಬುದನ್ನು ಈಗ ವಿವರವಾಗಿ ತಿಳಿಯೋಣ.

**ನೈಜ ಪ್ರೇಮಕಥೆಗಳು ಮತ್ತು ಸಂಬಂಧಗಳ ಜಟಿಲತೆಗಳು**

ಇಂದಿನ ಜೆನ್ ಜೀ ಪೀಳಿಗೆಯು ಹಳೇ ಮಾದರಿಯ ಅತಿ ನಾಟಕೀಯ ಪ್ರೇಮಕಥೆಗಳಿಂದ ದೂರ ಉಳಿಯಲು ಬಯಸುತ್ತದೆ.

ಬದಲಿಗೆ, ಇಂದಿನ ಯುವಕರ ವೃತ್ತಿಜೀವನದ ಒತ್ತಡಗಳು, ವೈಯಕ್ತಿಕ ಸ್ವಾತಂತ್ರ್ಯ, ಬ್ರೇಕಪ್‌ಗಳು ಮತ್ತು ಆಧುನಿಕ ಸಂಬಂಧಗಳ ಗೊಂದಲಗಳನ್ನು ಅತ್ಯಂತ ಸಹಜವಾಗಿ ಬಿಂಬಿಸುವ ಸಿನಿಮಾಗಳಿಗೆ ಇವರು ಹೆಚ್ಚು ಮತಹಾಕುತ್ತಿದ್ದಾರೆ. ಇತ್ತೀಚಿನ ಸಿನಿಮಾಗಳ ಜೊತೆಗೆ 96, ಸೀತಾ ರಾಮಂ ಮತ್ತು ಬೆಂಗಳೂರು ಡೇಸ್ ಮುಂತಾದ ಚಿತ್ರಗಳು ಈ ಯುವ ಮನಸ್ಸುಗಳನ್ನು ಆಳವಾಗಿ ಸೆಳೆದಿರುವುದಕ್ಕೆ ಇವೇ ಪ್ರಮುಖ ಕಾರಣಗಳಾಗಿವೆ.

**ವಾಸ್ತವಿಕ ಹಾಗೂ ಸಾಮಾನ್ಯ ಪಾತ್ರಗಳಿಗೆ ಒಲವು**

ಹೀರೋ ಅಂದರೆ ಎಲ್ಲಾ ಅಡೆತಡೆಗಳನ್ನು ಮುರಿಯುವ ಸೂಪರ್‌ಮ್ಯಾನ್ ಎಂಬ ಹಳೇ ಧಾಟಿಯನ್ನು ಜೆನ್ ಜೀ ಪ್ರೇಕ್ಷಕರು ಒಪ್ಪುವುದಿಲ್ಲ. ತಪ್ಪುಗಳನ್ನು ಮಾಡುವ, ಸೋಲುಗಳನ್ನು ಅನುಭವಿಸುವ ಮತ್ತು ಭವಿಷ್ಯದ ಬಗ್ಗೆ ಗೊಂದಲದಲ್ಲಿರುವ ಸಾಮಾನ್ಯ ಯುವಕರ ಪಾತ್ರಗಳೊಂದಿಗೆ ಇವರು ಸುಲಭವಾಗಿ ಕನೆಕ್ಟ್ ಆಗುತ್ತಾರೆ.

ಎಲ್ಲ ರೀತಿಯಿಂದಲೂ ಪರಿಪೂರ್ಣರಾದ ಅತಿಮಾನುಷ ನಾಯಕರಿಗಿಂತಲೂ, ದೋಷಗಳನ್ನು ಹೊಂದಿರುವ ಒರಟು ಮತ್ತು ನೈಜವಾದ ಸಾಮಾನ್ಯ ವ್ಯಕ್ತಿಗಳ ಜೀವನದ ಕಥೆಗಳನ್ನು ನೋಡಲು ಈ ಪೀಳಿಗೆಯು ಹೆಚ್ಚು ಉತ್ಸುಕವಾಗಿದೆ.

**ಸ್ನೇಹದ ಮಹತ್ವ ಮತ್ತು ಮಾನಸಿಕ ಒತ್ತಡದ ಕಥೆಗಳು**

ಸ್ನೇಹದ ಬಂಧವನ್ನು ನೈಜವಾಗಿ ಬಿಂಬಿಸುವ ಕಥೆಗಳನ್ನು ಜೆನ್ ಜೀ ಪ್ರೇಕ್ಷಕರು ಮನದುಂಬಿ ಸ್ವೀಕರಿಸುತ್ತಾರೆ.

ಇತ್ತೀಚಿನ ಮಂಜುಮ್ಮೆಲ್ ಬಾಯ್ಸ್ ಸಿನಿಮಾ ಇದಕ್ಕೆ ಅತ್ಯುತ್ತಮ ಉದಾಹರಣೆಯಾಗಿದೆ. ಉದ್ಯೋಗ, ಹಣಕಾಸಿನ ಸಮಸ್ಯೆ, ಒಂಟಿತನ, ಮಾನಸಿಕ ಒತ್ತಡ ಹಾಗೂ ಕಷ್ಟದ ಸಮಯದಲ್ಲಿ ಕೈಹಿಡಿಯುವ ಸ್ನೇಹದಂತಹ ಪ್ರಮುಖ ವಿಷಯಗಳನ್ನು ಕಥೆಯು ಆಳವಾಗಿ ಸ್ಪರ್ಶಿಸಿದರೆ, ಆ ಸಿನಿಮಾಗಳನ್ನು ಇಂದಿನ ಪ್ರೇಕ್ಷಕರು ತಮ್ಮದೇ ಸ್ವಂತ ಕಥೆಯಂತೆ ಸ್ವೀಕರಿಸಿ ಕೊಂಡಾಡುತ್ತಾರೆ.

### ಪ್ರಮುಖ ಮುಖ್ಯಾಂಶಗಳು

- ಸಿನಿಮಾ ವೀಕ್ಷಕರ ಅಭಿರುಚಿಯಲ್ಲಿ ವೇಗವಾಗಿ ಬದಲಾಗುತ್ತಿರುವ ಟ್ರೆಂಡ್‌ಗಳು
- ಮೇಲ್ಮೈ ಮನರಂಜನೆ ಬದಿಗಿಟ್ಟು ಕಥೆಯ ಆಳವನ್ನು ವಿಶ್ಲೇಷಿಸುತ್ತಿರುವ ಜೆನ್ ಜೀ ಪ್ರೇಕ್ಷಕರು
- ಹಳೇ ಮಾದರಿಯ ಪ್ರೇಮಕಥೆಗಳನ್ನು ಮರೆತು ನೈಜ ಸಂಬಂಧಗಳಿಗೆ ಮಣೆ ಹಾಕುತ್ತಿರುವ ಯುವಕರು
- ಅತಿಮಾನುಷ ನಾಯಕರ ಬದಲಿಗೆ ದೋಷಗಳನ್ನು ಹೊಂದಿರುವ ಸಾಮಾನ್ಯ ಪಾತ್ರಗಳಿಗೆ ಒಲವು
- ಅದ್ಭುತ ದೃಶ್ಯ ವೈಭವ ಹಾಗೂ ಸಾಮಾಜಿಕ ಜಾಲತಾಣದ ಟ್ರೆಂಡ್‌ಗಳಿಗೆ ತಕ್ಕಂತೆ ಬದಲಾದ ಸಿನಿಮಾಗಳು

**ಅದ್ಭುತ ದೃಶ್ಯ ವೈಭವ ಹಾಗೂ ಸಂಗೀತ**

ಕಥೆಯಷ್ಟೇ ಅಲ್ಲದೆ, ಸಿನಿಮಾದ ದೃಶ್ಯಗಳ ಗುಣಮಟ್ಟ , ಹಿನ್ನೆಲೆ ಸಂಗೀತ ಹಾಗೂ ಸಂಭಾಷಣೆಗಳ ಮೇಲೂ ಜೆನ್ ಜೀ ಪ್ರೇಕ್ಷಕರು ವಿಶೇಷ ಗಮನ ಹರಿಸುತ್ತಾರೆ.

ಸಾಮಾಜಿಕ ಜಾಲತಾಣಗಳಲ್ಲಿ ರೀಲ್ಸ್ ಮಾಡಲು, ಟ್ರೆಂಡ್‌ಗಳನ್ನು ಸೃಷ್ಟಿಸಲು ಮತ್ತು ಸ್ಟೇಟಸ್ ಹಾಕಲು ಯೋಗ್ಯವಾದ ಆಕರ್ಷಕ ದೃಶ್ಯಗಳು, ಸಂಭಾಷಣೆ ಹಾಗೂ ವೈರಲ್ ಆಗುವಂತಹ ಸನ್ನಿವೇಶಗಳನ್ನು ಹೊಂದಿರುವ ಸಿನಿಮಾಗಳೊಂದಿಗೆ ಈ ತಲೆಮಾರಿನ ಪ್ರೇಕ್ಷಕರು ತಕ್ಷಣವೇ ಬೆಸೆದುಕೊಳ್ಳುತ್ತಾರೆ.

ಒಟ್ಟಾರೆಯಾಗಿ ಹೇಳುವುದಾದರೆ, ಜೆನ್ ಜೀ ಸಿನಿಮಾ ಪ್ರೇಮಿಗಳ ಆಗಮನದೊಂದಿಗೆ ದಕ್ಷಿಣ ಭಾರತದ ಚಲನಚಿತ್ರ ರಂಗದಲ್ಲಿ ಕಥೆ ಹೇಳುವ ಶೈಲಿಯು ಸಂಪೂರ್ಣ ಹೊಸ ಮೈಲಿಗಲ್ಲನ್ನು ಮುಟ್ಟುತ್ತಿದೆ. ಹಳೇ ಮಾದರಿಯ ಫಾರ್ಮುಲಾ ಸಿನಿಮಾಗಳನ್ನು ಬದಿಗಿಟ್ಟು, ನೈಜ ಅಂಶಗಳು ಮತ್ತು ಆಕರ್ಷಕ ದೃಶ್ಯ ವೈಭವವನ್ನು ಹೊಂದಿರುವ ವಿಭಿನ್ನ ಕಥಾಹಂದರದ ಚಿತ್ರಗಳನ್ನು ಇಂದಿನ ಪ್ರೇಕ್ಷಕರು ಮುಕ್ತ ಮನಸ್ಸಿನಿಂದ ಸ್ವಾಗತಿಸುತ್ತಿದ್ದಾರೆ ಎಂಬುದು ಸ್ಪಷ್ಟವಾಗಿದೆ.

# ಮುಂದಿನ ಜನ್ಮದಲ್ಲೂ ನಿನ್ನ ಅಪ್ಪನಾಗ್ತೀನಿ! ಪ್ರಕಾಶ್ ರಾಜ್ ಡೈಲಾಗ್‌ಗೆ ಫ್ಯಾನ್ಸ್ ಫಿದಾ!

ಫಾದರ್ ಚಿತ್ರ ಟೀಸರ್ ಹೊಸ ಭರವಸೆ ಮೂಡಿಸುತ್ತಿದೆ. ಅಪ್ಪ ಮತ್ತು ಮಗನ ಭಾವನಾತ್ಮಕ ಕತೆಯ ಚಿತ್ರ ಇದಾಗಿದೆ. ಟೀಸರ್ ಅಲ್ಲಿರೋ ಎರಡು ಡೈಲಾಗ್ ಎಲ್ಲರಿಗೂ ಕನೆಕ್ಟ್ ಆಗುವ ರೀತಿನೆ ಇವೆ. ಕನ್ನಡದ ಫಾದರ್ ಚಿತ್ರದ ಟೀಸರ್ ರಿಲೀಸ್ ಆಗಿದೆ. ಎಲ್ಲರ ಗಮನ ಸೆಳೆಯುವಂತೆ ಇದೆ. ಸಾಮಾನ್ಯವಾಗಿ ಅಮ್ಮನ ಮೇಲೆ ಹೆಚ್ಚಿನ ಸಿನಿಮಾಗಳು ಬಂದಿವೆ. ಅಮ್ಮನ ವಿಷಯಗಳನ್ನೆ ಹೆಚ್ಚು ಹೈಲೈಟ್ ಮಾಡಿರೋದು ಇದೆ. ಆದರೆ, ಈ ಚಿತ್ರ ಅಪ್ಪನ ಮಹತ್ವವನ್ನ ಸಾರುವಂತೆ ಇದೆ. ಈ ಸಿನಿಮಾದ ಟೀಸರ್ ಅಲ್ಲಿ ಎರಡು ಡೈಲಾಗ್ ಇವೆ. ಒಂದನ್ನ ಅಪ್ಪ ಹೇಳ್ತಾರೆ. ಇನ್ನೊಂದನ್ನ ಮಗ ಹೇಳ್ತಾರೆ. ಇವರ ಈ ಡೈಲಾಗ್ ಜನಕ್ಕೆ ಆ ಕ್ಷಣವೇ ಕನೆಕ್ಟ್ ಆಗುವ ರೀತಿನೇ ಇವೆ. ಟೀಸರ್ ಅಲ್ಲಿ ಇದೇ ಹೈಲೈಟ್ ಆಗಿದೆ. ಆದರೆ, ಇಲ್ಲಿ ಹೆಚ್ಚು ಮಾತಿಲ್ಲ. ಎಕ್ಸಪ್ರೆಷನ್ ಜಾಸ್ತಿ ಇದೆ.



# ಮಾರಣಾಂತಿಕ ಕಾಯಿಲೆಗೆ ಆರೈಕೆ ಅತ್ಯವಶ್ಯಕ

## ಆಶಾ ಕಾರ್ಯಕರ್ತೆಯರಿಗೆ ''ಹರ್ ಘರ್ ಜೀವ ಸೇವಕ್'' ಜೀವನ ಕೌಶಲ್ಯ ತರಬೇತಿ ಕಾರ್ಯಕ್ರಮ

• ಪ್ರಜೋದಯ ವರದಿ

**ಹಾಸನ:** ಕ್ಯಾನ್ಸರ್ ಹಾಗೂ ಮಾರಣಾಂತಿಕ ಮತ್ತು ದೀರ್ಘಾವಧಿ ಕಾಯಿಲೆಗಳಿಂದ ಬಳಲುತ್ತಿರುವ ಪ್ರತಿಯೊಬ್ಬ ವ್ಯಕ್ತಿಗೂ ಉಪಶಮನ ಆರೈಕೆ ಅತ್ಯವಶ್ಯಕವಾಗಿದೆ ಎಂದು ಹಾಸನ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ|| ಬಿ.ಆರ್. ಯುವರಾಜ್ ಅವರು ತಿಳಿಸಿದ್ದಾರೆ.



ನಗರದ ಡಿ.ಹೆಚ್.ಓ. ಕಚೇರಿಯ ಬಿ.ಸಿ.ರಾಯ್ ಸಭಾಂಗಣದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಸನ ಜಿಲ್ಲೆ, ಸ್ವಾಮಿ ವಿವೇಕಾನಂದ ಯೂತ್ ಮೂವ್ ಮೆಂಟ್ ಹಾಗೂ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಇವರ ಸಹಭಾಗಿತ್ವದಲ್ಲಿ ಗುರುವಾರ ಆಯೋಜಿಸಿದ್ದ ಉಪಶಮನ ಆರೈಕೆ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಪ್ರತಿಯೊಬ್ಬ ರೋಗಿಯು ನೋವಿನಿಂದ ಮುಕ್ತವಾಗಿ ಮತ್ತು ಗೌರವಯುತವಾಗಿ ಬದುಕುವ ಹಕ್ಕನ್ನು ಹೊಂದಿದ್ದಾರೆ ಎಂದು ತಿಳಿಸಿದರು.

ರೋಗಿಗಳಿಗೆ ದೈಹಿಕ, ಮಾನಸಿಕ, ಸಾಮಾಜಿಕ ಹಾಗೂ ಆಧ್ಯಾತ್ಮಿಕ ಬೆಂಬಲ ನೀಡುವುದರ ಜೊತೆಗೆ ರೋಗಿ ಮತ್ತು ಕುಟುಂಬದವರಿಗೆ ಆತ್ಮಸ್ಥೈರ್ಯ ತುಂಬುವ ಕಾರ್ಯವನ್ನು ಪ್ರತಿಯೊಬ್ಬರೂ ಮಾಡಬೇಕಾಗಿದೆ, ಜಿಲ್ಲೆಯಲ್ಲಿ ಉಪಶಮನ ಆರೈಕೆ ಅವಶ್ಯಕತೆ ಇರುವ ಪ್ರತಿಯೊಬ್ಬ ರೋಗಿಗೂ ಸೇವೆ ತಲುಪಿಸಲು ಆರೋಗ್ಯ ಇಲಾಖೆಯ ಸಿಬ್ಬಂದಿಗಳು ಮತ್ತು ವಿವಿಧ ಸಂಘ-ಸಂಸ್ಥೆಗಳು ಸಮನ್ವಯದಿಂದ ಹಾಗೂ ಸಹಕಾರದಿಂದ ಕೆಲಸ ಮಾಡಿದರೆ ಮಾತ್ರ ಕ್ಯಾನ್ಸರ್ ಹಾಗೂ ಇನ್ನಿತರ ಮಾರಣಾಂತಿಕ ಮತ್ತು ದೀರ್ಘಾವಧಿ ಕಾಯಿಲೆಗಳಿಂದ ಬಳಲುತ್ತಿರುವ ರೋಗಿಗಳಿಗೆ ಗುಣಮಟ್ಟದ ಉಪಶಮನ ಆರೈಕೆಯನ್ನು ಮನೆಮಟ್ಟದಲ್ಲಿ ಪರಿಣಾಮಕಾರಿಯಾಗಿ ತಲುಪಿಸಲು ಸಾಧ್ಯ ಎಂದು ತಿಳಿಸಿದರು.

ಈ ನಿಟ್ಟಿನಲ್ಲಿ ಆಶಾ ಕಾರ್ಯಕರ್ತೆಯರಿಗೆ ಹರ್ ಘರ್ ಜೀವ ಸೇವಕ್ - ಜೀವನ ಕೌಶಲ್ಯ ತರಬೇತಿ ಕಾರ್ಯಕ್ರಮದ ಸದುಪಯೋಗವನ್ನು ಆಶಾ ಕಾರ್ಯಕರ್ತೆಯರು ಪಡೆದುಕೊಳ್ಳಬೇಕು ಎಂದರು.

ಸ್ವಾಮಿ ವಿವೇಕಾನಂದ ಯೂತ್ ಮೂವ್ ಮೆಂಟ್ ಸಂಸ್ಥೆಯ ಅಧ್ಯಕ್ಷ ಡಾ|| ಸುದೀರ್ ಬಿ. ಬೆಂಗಳೂರಿ ಅವರು ಸ್ವಾಮಿ ವಿವೇಕಾನಂದ ಯೂತ್ ಮೂವ್ ಮೆಂಟ್ ಸಂಸ್ಥೆ, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಸಹಭಾಗಿತ್ವ ಮತ್ತು ಆರೋಗ್ಯ ಇಲಾಖೆಯ ಸಹಕಾರದಿಂದ ಕಳೆದ 8 ವರ್ಷಗಳಿಂದ ಜಿಲ್ಲೆಯಲ್ಲಿ ಮನೆ ಆಧಾರಿತ ಉಪಶಮನ ಆರೈಕೆಯನ್ನು ಅನುಷ್ಠಾನಗೊಳಿಸುತ್ತಿದೆ, ಇಲ್ಲಿಯವರೆಗೆ ಕ್ಯಾನ್ಸರ್ ಹಾಗೂ ಇತರೆ ಮಾರಣಾಂತಿಕ ಮತ್ತು ದೀರ್ಘಕಾಲೀನ ಕಾಯಿಲೆಗಳಿಂದ ಬಳಲುತ್ತಿರುವ 2,050ಕ್ಕೂ ಹೆಚ್ಚು ರೋಗಿಗಳಿಗೆ ಉಪಶಮನ ಆರೈಕೆ ಒದಗಿಸಲಾಗಿದೆ ತಿಳಿಸಿದರು.

ಪ್ರಸ್ತುತ 800 ರೋಗಿಗಳಿಗೆ ನೋವು ಮತ್ತು ಇತರ ರೋಗಲಕ್ಷಣಗಳ ನಿರ್ವಹಣೆ, ನರ್ಸಿಂಗ್ ಆರೈಕೆ, ಮಾನಸಿಕ-ಸಾಮಾಜಿಕ ಬೆಂಬಲ, ಕುಟುಂಬದ ಆರೈಕೆದಾರರಿಗೆ ಮಾರ್ಗದರ್ಶನ ಹಾಗೂ ನಿರಂತರ ಅನುಸರಣೆ ಸೇವೆಗಳನ್ನು ಒದಗಿಸಲಾಗುತ್ತಿದೆ, ಜಿಲ್ಲೆಯಲ್ಲಿ ಉಪಶಮನ ಆರೈಕೆ ಅವಶ್ಯಕತೆ ಇರುವ ಇನ್ನೂ ಹೆಚ್ಚಿನ ರೋಗಿಗಳಿಗೆ ಮನೆಯಾಧಾರಿತ ಉಪಶಮನ ಆರೈಕೆ ನೀಡಲು ಆರೋಗ್ಯ ಇಲಾಖೆ ಮತ್ತು ವಿವಿಧ ಸಂಘ ಸಂಸ್ಥೆಗಳು ಕೈ ಜೋಡಿಸುವಂತೆ ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಹಾಸನ ತಾಲ್ಲೂಕಿನ ಆರೋಗ್ಯಾಧಿಕಾರಿಗಳಾದ ಡಾ|| ವಿಜಯ್ ಬಿ.ಎಂ. ಅವರು ಮಾತನಾಡಿ ದಿನೇ ದಿನೇ ಉಪಶಮನ ಆರೈಕೆ ಅವಶ್ಯಕತೆ ಇರುವ ರೋಗಿಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ರೋಗಿಗಳ ಮತ್ತು ಆರೈಕೆ ಮಾಡುತ್ತಿರುವ ಆರೈಕೆದಾರರ ದೈಹಿಕ ಮತ್ತು ಮಾನಸಿಕ ನೋವನ್ನು ಕಡಿಮೆ ಮಾಡುವ ಅತ್ಯುತ್ತಮ ಸೇವೆಯೇ ಉಪಶಮನ ಆರೈಕೆಯಾಗಿದೆ ಇದರ ಅಗತ್ಯವಿರುವ ಪ್ರತಿಯೊಬ್ಬ ರೋಗಿಯೂ ಪ್ಯಾಲಿಯೆಟಿವ್ ಕೇರ್ ಸೇವೆಯ ಸದುಪಯೋಗ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು ( ಡಿ ಎಸ್ ಓ ) ಮತ್ತು ಎನ್ ಸಿ ಡಿ ಹಾಗೂ ಪ್ಯಾಲಿಯೇಟಿವ್ ಕೇರ್ ಕಾರ್ಯಕ್ರಮದ ನೋಡಲ್ ಅಧಿಕಾರಿಗಳಾದ ಡಾ|| ಸತೀಶ್ ಕುಮಾರ್ ಬಿ.ವಿ, ಡಾ|| ನಾಗಪ್ಪ ಜಿ.ಎಸ್, ಡಾ|| ವಿಜಯ್ ಗೊರೂರು, ಡಾ|| ಜಗದೀಶ್, ಆರೋಗ್ಯ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಕುಂದು-ಕೊರತೆ ಆಲಿಸಲು ಪ್ರಜಾಸೇವೆ ಆಂದೋಲನ ಸಭೆ

## ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಮಾಹಿತಿ

• ಪ್ರಜೋದಯ ವರದಿ

**ಹಾಸನ:** ಸಾರ್ವಜನಿಕರ ಕುಂದು-ಕೊರತೆಗಳನ್ನು ಆಲಿಸಿ, ಅವುಗಳಿಗೆ ಸಕಾಲದಲ್ಲಿ ಸೂಕ್ತ ಸಮಾಧಾನದ ಪರಿಹಾರ ನೀಡುವುದು ಸರ್ಕಾರದ ಆದ್ಯತೆ ಆಗಿದ್ದು, ರಾಜ್ಯಾದ್ಯಂತ ಪ್ರತಿ ಜಿಲ್ಲೆಗಳಲ್ಲಿ ತಾಲ್ಲೂಕು ಮಟ್ಟದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಮತ್ತು ಹೋಬಳಿ ಮಟ್ಟದಲ್ಲಿ ಸ್ಥಳೀಯ ಶಾಸಕರ ನೇತೃತ್ವದಲ್ಲಿ ಪ್ರತಿ ತಿಂಗಳ ಮೊದಲನೇ ಹಾಗೂ ಮೂರನೇ ಶನಿವಾರ ಪ್ರಜಾಸೇವೆ ಆಂದೋಲನ ಸಭೆಗಳನ್ನು ಆಯೋಜಿಸಲು ನಿಗದಿ ಪಡಿಸಲಾಗಿದೆ ಎಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ತಿಳಿಸಿದ್ದಾರೆ.



ಪ್ರತಿ ತಿಂಗಳ 1ನೇ ಮತ್ತು 3ನೇ ಶನಿವಾರ ತಾಲ್ಲೂಕು ಮಟ್ಟದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಮತ್ತು ಪ್ರತಿ ತಿಂಗಳ 2ನೇ ಮತ್ತು 4ನೇ ಶನಿವಾರ ಹೋಬಳಿ ಮಟ್ಟದಲ್ಲಿ ಸ್ಥಳೀಯ ಶಾಸಕರ ನೇತೃತ್ವದಲ್ಲಿ ಪ್ರಜಾಸೇವೆ ಆಂದೋಲನ ಸಭೆಗಳನ್ನು ಆಯೋಜಿಸುವಂತೆ ತಿಳಿಸಿದ್ದಾರೆ.

**ತಾಲ್ಲೂಕು ಮಟ್ಟದಲ್ಲಿ:** ಅರಕಲಗೂಡು ತಾಲ್ಲೂಕಿನಲ್ಲಿ ಅಕ್ಟೋಬರ್ -03, ಅರಸೀಕೆರೆ ತಾಲ್ಲೂಕು ನ.-07, ಹೊಳೆನರಸೀಪುರ ತಾಲ್ಲೂಕು ಡಿಸೆಂಬರ್-05, ಚನ್ನರಾಯಪಟ್ಟಣ ತಾಲ್ಲೂಕು 2027 ಜನವರಿ-02, ಸಕಲೇಶಪುರ-ಆಲೂರು ತಾಲ್ಲೂಕು ಫೆಬ್ರವರಿ-6, ಹಾಸನ ತಾಲ್ಲೂಕು ಮಾರ್ಚ್-6, ಬೇಲೂರು ತಾಲ್ಲೂಕು ಏಪ್ರಿಲ್-10 ರಂದು ತಾಲ್ಲೂಕು ಮಟ್ಟದ ಪ್ರಜಾಸೇವೆ ಆಂದೋಲನ ಸಭೆಯನ್ನು ನಡೆಸಲಾಗುತ್ತದೆ ಎಂದು ತಿಳಿಸಿದ್ದಾರೆ.

**ಹೋಬಳಿ ಮಟ್ಟದಲ್ಲಿ:** ಚನ್ನರಾಯಪಟ್ಟಣ ತಾಲ್ಲೂಕಿನ ಶ್ರವಣಬೆಳಗೊಳ ಹೋಬಳಿಯಲ್ಲಿ ಸೆಪ್ಟೆಂಬರ್-19, ಬೇಲೂರು ತಾಲ್ಲೂಕಿನ ಹಳೆಬೀಡು ಹೋಬಳಿಯಲ್ಲಿ ಸೆಪ್ಟೆಂಬರ್-26, ಸಕಲೇಶಪುರ ತಾಲ್ಲೂಕಿನ ಹೆತ್ತೂರು ಹೋಬಳಿಯಲ್ಲಿ ಅಕ್ಟೋಬರ್-10, ಅರಕಲಗೂಡು ತಾಲ್ಲೂಕಿನ ಕೊಣನೂರು ಹೋಬಳಿಯಲ್ಲಿ ಅಕ್ಟೋಬರ್ - 24, ಅರಸೀಕೆರೆ ತಾಲ್ಲೂಕಿನ ಬಾಣಾವರ ಹೋಬಳಿಯಲ್ಲಿ ನವೆಂಬರ್-14, ಹೊಳೆನರಸೀಪುರ ತಾಲ್ಲೂಕಿನ ಹಳ್ಳಿಮೈಸೂರು ಹೋಬಳಿಯಲ್ಲಿ ನವೆಂಬರ್-28, ಹಾಸನ ತಾಲ್ಲೂಕಿನ ಸಾಲಗಾಮೆ ಹೋಬಳಿಯಲ್ಲಿ ಡಿಸೆಂಬರ್-12 ರಂದು ನಡೆಸಲಾಗುವುದು.

ಚನ್ನರಾಯಪಟ್ಟಣ ತಾಲ್ಲೂಕಿನ ಬಾಗೂರು ಹೋಬಳಿಯಲ್ಲಿ ಡಿ. -2, ಬೇಲೂರು ತಾಲ್ಲೂಕಿನ ಮಾದೀಹಳ್ಳಿ ಹೋಬಳಿ ಯಲ್ಲಿ 2027 ಜನವರಿ-09, ಆಲೂರು ತಾಲ್ಲೂಕಿನ ಕಸಬಾ ಹೋಬಳಿಯಲ್ಲಿ ಜನವರಿ -23, ಅರಕಲಗೂಡು ತಾಲ್ಲೂಕಿನ ಮಲ್ಲಿಪಟ್ಟಣ ಹೋಬಳಿಯಲ್ಲಿ ಫೆಬ್ರವರಿ-20, ಅರಸೀಕೆರೆ ತಾಲ್ಲೂಕಿನ ಕಣಕಟ್ಟೆ ಹೋಬಳಿಯಲ್ಲಿ ಫೆಬ್ರವರಿ -27, ಹೊಳೆನರಸೀಪುರ ತಾಲ್ಲೂಕಿನ ಹಳೇಕೋಟೆ ಹೋಬಳಿಯಲ್ಲಿ ಮಾರ್ಚ್-20, ಹಾಸನ ತಾಲ್ಲೂಕಿನ ಶಾಂತಿಗ್ರಾಮ ಹೋಬಳಿಯಲ್ಲಿ ಮಾರ್ಚ್ 27 ರಂದು ಹೋಬಳಿ ಮಟ್ಟದ ಪ್ರಜಾಸೇವೆ ಆಂದೋಲನ ಸಭೆಯನ್ನು ಮನವಿಗಳನ್ನು ಗುಣಾತ್ಮಕವಾಗಿ ವಿಲೇವಾರಿ ಮಾಡುವ ಕುರಿತು ಸಭೆಯನ್ನು ನಡೆಸಲಾಗುತ್ತದೆ ಎಂದು ತಿಳಿಸಿದ್ದಾರೆ.

## ನೋಂದಾಯಿತ ಕುಟುಂಬಕ್ಕೆ ಜೀವಿತಾವಧಿಯಲ್ಲಿ 5 ಲಕ್ಷ ರೂ.ವರೆಗೆ ಆರ್ಥಿಕ ನೆರವು

# ವಿಬಿಜಿ ಜಿ ರಾಮ್ ಯೋಜನೆಯಿಂದ ಸ್ವಾವಲಂಬಿಗಳಾಗಿ

• ಪ್ರಜೋದಯ ವರದಿ

**ಹಾಸನ:** ವಿಬಿಜಿ ರಾಮ್ ಜಿ ಯೋಜನೆಯಡಿ ಒಂದು ನೋಂದಾಯಿತ ಕುಟುಂಬವು ಜೀವಿತಾವಧಿಯಲ್ಲಿ 5 ಲಕ್ಷ ರೂ.ವರೆಗೆ ಆರ್ಥಿಕ ನೆರವು ಪಡೆಯಬಹುದಾಗಿದೆ ಜೊತೆಗೆ ಒಂದು ದಿನಕ್ಕೆ ರೂ 382 ಕೂಲಿ ಹಾಗೂ ಒಂದು ಆರ್ಥಿಕ ವರ್ಷದಲ್ಲಿ 125 ದಿವಸ ಉದ್ಯೋಗವನ್ನು ನೀಡಲಾಗುತ್ತದೆ ಸಾರ್ವಜನಿಕರು ಇದರ ಸದುಪಯೋಗ ಪಡಿಸಿಕೊಂಡು ಆರ್ಥಿಕವಾಗಿ ಸ್ವಾವಲಂಬಿಗಳಾಗುವಂತೆ ದುದ್ದ ಗ್ರಾಮ ಪಂಚಾಯಿತಿ ಆಡಳಿತಾಧಿಕಾರಿ ಡಾ. ಮನು ಕುಮಾರ್ ಅವರು ತಿಳಿಸಿದ್ದಾರು.



ತಾಲ್ಲೂಕಿನ ದುದ್ದ ಗ್ರಾಮ ಪಂಚಾಯಿತಿಯಲ್ಲಿ ವಿಕಸಿತ ಭಾರತ ಗ್ಯಾರಂಟಿ ಫಾರ್ ರೋಜಗಾರ್ ಅಂಡ್ ಆಜೀವಿಕ ಮಿಷನ್ (ಗ್ರಾಮೀಣ) ಯೋಜನೆಯಡಿ ಜಾಬ್ ಕಾರ್ಡ್ ಮೇಳ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಜಾಬ್ ಕಾರ್ಡ್ ಹೊಂದಿರುವ ಎಲ್ಲಾ ಕುಟುಂಬಗಳು ವೈಯಕ್ತಿಕವಾಗಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಜಾನುವಾರು ಕೊಟ್ಟಿಗೆ, ಕೋಳಿ, ಹಂದಿ, ಕುರಿ, ಆಡು ಶೆಡ್ ನಿರ್ಮಾಣ ಮಾಡಿಕೊಳ್ಳಲು ಆರ್ಥಿಕ ನೆರವು ನೀಡಲಾಗುವುದು, ತೋಟಗಾರಿಕೆ ಬೆಳೆಗಳಾದ ತೆಂಗು, ಸೀತಾಫಲ, ಹಲಸು, ಡ್ರಾಗನ್ ಫ್ರೂಟ್, ಅಡಿಕೆ, ದಾಳಿಂಬೆ, ಸಪೋಟ ಬೆಳೆಗಳನ್ನು ಬೆಳೆಯಲು ಅವಕಾಶ ವಿದೆ. ಕೃಷಿ ಸಂಬಂಧಿತ ಕಾಮಗಾರಿಗಳಾದ ಕೃಷಿ ಹೊಂಡ, ಗೊಬ್ಬರದ ಗುಂಡಿ, ರೈತರ ಮರು ಪೂರ್ಣ ಘಟಕ, ಸೇರಿದಂತೆ ಇನ್ನಿತರ ವೈಯಕ್ತಿಕ ಕಾಮಗಾರಿ ನಿರ್ಮಾಣ ಮಾಡಿಕೊಳ್ಳಲು ವಿಬಿಜಿ ರಾಮ್ ಜಿ ಯೋಜನೆಯಡಿ ಆರ್ಥಿಕ ನೆರವು ನೀಡಲಾಗುವುದು ಎಂದರು.

ದುದ್ದ ಗ್ರಾಮ ಪಂಚಾಯಿತಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ರೇಖಾ ಅವರು ಮಾತನಾಡಿ, ಸೆಪ್ಟಂಬರ್ 15 ರವರಿಗೆ ಜಾಬ್ ಕಾರ್ಡ್ ಮೇಳ ಕಾರ್ಯಕ್ರಮ ಹಮ್ಮಿಕೊಂಡಿದ್ದು ಈ ಕಾರ್ಯಕ್ರಮದಡಿ ಮನೆ ಮನೆ ಬೇಟಿ ನೀಡುವುದು, ಸಾರ್ವಜನಿಕ ಸ್ಥಳಗಳಾದ ಹಾಲಿನ ಡೈರಿ, ಅರಳಿಕಟ್ಟೆ, ಟೀ ಅಂಗಡಿ, ಬಸ್ ಸ್ಟ್ಯಾಂಡ್, ರೇಷನ್ ಅಂಗಡಿ ಮುಂತಾದ ಸ್ಥಳಗಳಲ್ಲಿ ಜಾಬ್ ಕಾರ್ಡ್ ಮೇಳ ಬ್ಯಾನರ್ ಹಿಡಿದು ವಿಬಿಜಿ ರಾಮ್ ಜಿ ಮಾಹಿತಿಯುಳ್ಳ ಕರಪತ್ರಗಳನ್ನು ನೀಡುವ ಮೂಲಕ ಪ್ರಚಾರ ಮಾಡಲಾಗುತ್ತಿದೆ ಎಂದು ತಿಳಿಸಿದರು.

SBM ಕಸದ ಸ್ವಚ್ಛ ವಾಹಿನಿ, ಡಂಗೂರ ಸೇರಿದಂತೆ ಇನ್ನಿತರ ಮೂಲಕ ವಿಬಿಜಿ ರಾಮ್ ಜಿ ಜಿಂಗಲ್ಸ್ ಮುಖಾಂತರ ಪ್ರಚಾರ ಕೈಗೊಳ್ಳಲಾಗುತ್ತಿದೆ. ಈಗಾಗಲೇ ಕ್ರಿಯಾ ಯೋಜನೆಯಲ್ಲಿ ಅನುಮೋದನೆಯಾಗಿರುವ ವೈಯಕ್ತಿಕ ಕಾಮಗಾರಿಗಳನ್ನು ನಿರ್ಮಾಣ ಮಾಡಿಕೊಳ್ಳಲು ದುದ್ದ ಗ್ರಾಮ ಪಂಚಾಯಿತಿಯಿಂದ ಫಲಾನುಭವಿಗಳಿಗೆ ಕಾರ್ಯದೇಶ ಪ್ರತಿಯನ್ನು ನೀಡಲಾಗುತ್ತಿದೆ ಎಂದರು.

ದುದ್ದ ಗ್ರಾಮ ಪಂಚಾಯಿತಿ ಸಿಬ್ಬಂದಿಗಳು ಹಾಜರಿದ್ದರು

# ಪಶು ಆಸ್ಪತ್ರೆ, ಸಮುದಾಯ ಭವನಕ್ಕೆ ಭೂಮಿ ಪೂಜೆ

## 50 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣ: ರೇವಣ್ಣ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ದಂಡಿಗನಹಳ್ಳಿ ಹೋಬಳಿ ಕುಂಭೇನಹಳ್ಳಿ ಗ್ರಾಮ ಸೇರಿ ಅಕ್ಕಪಕ್ಕದ ಹತ್ತಕ್ಕೂ ಹೆಚ್ಚು ಹಳ್ಳಿಗಳ ರೈತರು ಮತ್ತು ಗ್ರಾಮಸ್ಥರಿಗೆ ಗುಣಮಟ್ಟದ ವಿದ್ಯುತ್ ಪೂರೈಕೆಗಾಗಿ 5 ಕೋಟಿ ರೂ. ವೆಚ್ಚದಲ್ಲಿ ಶೀಘ್ರವೇ ವಿದ್ಯುತ್ ವಿತರಣಾ ಕೇಂದ್ರ ಸ್ಥಾಪನೆ ಮಾಡಲಾಗುವುದು ಎಂದು ಶಾಸಕ ಹೆಚ್.ಡಿ.ರೇವಣ್ಣ ಅವರು ಮಾಹಿತಿ ನೀಡಿದರು.



ಕುಂಭೇನಹಳ್ಳಿ ಗೇಟ್‌ನಲ್ಲಿನ ಗ್ರಾಮ ಪಂಚಾಯಿತಿ ಕಛೇರಿ ಪಕ್ಕದಲ್ಲಿ 32 ಲಕ್ಷ ರೂ. ವೆಚ್ಚದ ಪಶು ಆಸ್ಪತ್ರೆ ಹಾಗೂ 20 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಾಗುವ ಸಮುದಾಯ ಭವನ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, 5 ಕೋಟಿ ರೂ. ವೆಚ್ಚದ ವಿದ್ಯುತ್ ವಿತರಣಾ ಕೇಂದ್ರ ನಿರ್ಮಾಣಕ್ಕೆ 2 ಎಕರೆ ಜಾಗವನ್ನು ಈಗಾಗಲೇ ಹಸ್ತಾಂತರಿಸಲಾಗಿದ್ದು, ಟೆಂಡರ್ ಪ್ರಕ್ರಿಯೆ ಮುಗಿದಿದ್ದು, 15 ದಿನದಲ್ಲಿ ಕಾಮಗಾರಿ ಆರಂಭಗೊಳ್ಳಲಿದೆ. ಇದರೊಂದಿಗೆ ಗ್ರಾಮಸ್ಥರ ಒತ್ತಾಯದಂತೆ ಬಿಎಂಸಿ ಘಟಕ ಮತ್ತು ಜನರಲ್ ಆಸ್ಪತ್ರೆ ನಿರ್ಮಾಣಕ್ಕೂ ಆದ್ಯತೆ ನೀಡಲಾಗುವುದು ಎಂದರು.

1ನೇ ತರಗತಿಯಿಂದ 12ನೇ ತರಗತಿವರೆಗೆ ಗುಣಮಟ್ಟದ ಶಿಕ್ಷಣ ಬಡವರ ಮಕ್ಕಳಿಗೆ ದೊರಕಿಸಿಕೊಡುವ ಉದ್ದೇಶದೊಂದಿಗೆ ಅಗ್ರಹಾರ ಗೇಟ್‌ನಲ್ಲಿ ಕರ್ನಾಟಕ ಪಬ್ಲಿಕ್ ಶಾಲೆಯನ್ನು ಅತೀ ಶೀಘ್ರದಲ್ಲೇ ಆರಂಭಿಸಿ ಉಚಿತ ಶಿಕ್ಷಣ ನೀಡಲಾಗುವುದು ಎಂದು ತಿಳಿಸಿದರಲ್ಲದೆ, ಈಗಾಗಲೇ ಕುಂಭೇನಹಳ್ಳಿಗೆ ಗ್ರಾಮ ಪಂಚಾಯಿತಿ ಕಛೇರಿ, ಪ್ರೌಢಶಾಲೆ, ಮೂರಾರ್ಜೀ ವಸತಿ ಶಾಲೆ ನಿರ್ಮಾಣವಾಗಿದ್ದು, ಇದೀಗ ಸಮುದಾಯ ಭವನ, ವಿದ್ಯುತ್ ವಿತರಣಾ ನಾಲೆ, ಪಶು ಆಸ್ಪತ್ರೆ ನಿರ್ಮಾಣದೊಂದಿಗೆ ಅಭಿವೃದ್ಧಿಗೆ ಒತ್ತು ನೀಡಲಾಗಿದೆ ಎಂದು ಅವರು ತಿಳಿಸಿದರು.

ವಿಧಾನ ಪರಿಷತ್ ಸದಸ್ಯ ಡಾ. ಸೂರಜ್ ರೇವಣ್ಣ ಅವರು ಮಾತನಾಡಿ, ನಮ್ಮ ತಂದೆಯವರಿಗೆ ರಾಜಕೀಯ ಶಕ್ತಿ ತುಂಬಿದ ಈ ಭಾಗದ ರೈತರ ಏಳಿಗೆಗಾಗಿ ತಮ್ಮ ಕುಟುಂಬವು ಸದಾ ದುಡಿಯುತ್ತಿದ್ದು, ಮುಂದಿನ ದಿನಗಳಲ್ಲೂ ಸಹ ಈ ಭಾಗದ ರೈತರ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ಜಾರಿ ಮಾಡಲಾಗುವುದು ಎಂದು ಹೇಳೀದರು.

ಬಹುದಿನಗಳ ಬೇಡಿಕೆಯಾದ ಜನರಲ್ ಆಸ್ಪತ್ರೆ ನಿರ್ಮಾಣಕ್ಕೆ ಬದ್ಧವಾಗಿದ್ದು, ಈ ಭಾಗದ ಬಡ ರೈತರ ಮಕ್ಕಳ ಮದುವೆ ಮತ್ತು ಇನ್ನಿತರ ಶುಭ ಸಮಾರಂಭಗಳಿಗೆ ಅನುಕೂಲವಾಗುವ ದೃಷ್ಟಿಯಿಂದ ಸಮುದಾಯ ಭವನದ ಕಾಮಗಾರಿಗೆ ಎಚ್.ಡಿ.ರೇವಣ್ಣ ಅವರ ನೇತೃತ್ವದಲ್ಲಿ ಚಾಲನೆ ನೀಡಲಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಮುಖಂಡರಾದ ಕೆ.ಜೆ.ಸುರೇಶ್, ಹೊನ್ನಶೆಟ್ಟಿಹಳ್ಳಿ ದೀಪು, ಎ.ಎಂ.ಬಾಲಚಂದ್ರ, ರೂಪೇಶ್, ವಾಸು, ವಿಕಾಸ್, ದಿಲೀಪ್, ರವಿ, ಮಧು, ರಂಗಸ್ವಾಮಿ, ಅಗ್ರಹಾರ ದಿನೇಶ, ಅಗ್ರಹಾರ ಕೊಪ್ಪಲು ಪ್ರಭಾಕರ್, ಕೊಪ್ಪಲು ನಾಗರಾಜು, ಚೋಳೇಹಳ್ಳಿ ಮಂಜಣ್ಣ ಇನ್ನಿತರರು ಹಾಜರಿದ್ದರು.

# ಸಂಚಾರಕ್ಕೆ ಅಡ್ಡಿ: ಜಿಲ್ಲಾಡಳಿತಕ್ಕೆ ದೂರು



• ಪ್ರಜೋದಯ ವರದಿ

**ಹಾಸನ:** ನಗರದ ಎಸ್‌ಬಿಎಂ ಕಾಲೋನಿ ಸಮೀಪದ ನಂದಿನಿ ಬಡಾವಣೆಯ ಮುಖ್ಯ ರಸ್ತೆಯನ್ನು ವ್ಯಕ್ತಿಯೊಬ್ಬರು ಜೆಸಿಬಿಯಿಂದ ಬಗೆದು ಸಾರ್ವಜನಿಕರ ಸಂಚಾರಕ್ಕೆ ಅಡಚಣೆ ಉಂಟು ಮಾಡಿದ್ದಾರೆ ಎಂದು ಆರೋಪಿಸಿ ಬಡಾವಣೆ ನಿವಾಸಿಗಳು ಜಿಲ್ಲಾಡಳಿತಕ್ಕೆ ದೂರು ಸಲ್ಲಿಸಿದರು.

ಹಾಸನ-ಅರಸೀಕೆರೆ ರಸ್ತೆಯಿಂದ ಎಸ್‌ಬಿಎಂ ಕಾಲೋನಿ ಮೂಲಕ ಗಣಪತಿ ದೇವಸ್ಥಾನ, ನಂದಿನಿ ಲೇಔಟ್, ಟೀಚರ್ಸ್ ಕಾಲೋನಿ 2ನೇ ಹಂತ, ಶರಾವತಿ ಲೇಔಟ್ ಹಾಗು ಹೆಲ್ತ್ ಲೇಔಟ್‌ಗಳಿಗೆ ಸಂಪರ್ಕ ಕಲ್ಪಿಸುವ ಪ್ರಮುಖ ರಸ್ತೆ ಇದಾಗಿದೆ. ಆದರೆ, ಆ.25ರಂದು ಸ್ವಾಮಿ ಎಂಬುವರು ಜೆಸಿಬಿ ಮೂಲಕ ರಸ್ತೆಯ ಒಂದು ಭಾಗವನ್ನು ಏಕಾಏಕಿ ಅಗೆದು, ಟ್ರಂಚ್ ನಿರ್ಮಿಸಿ ಸಾರ್ವಜನಿಕರ ಸಂಚಾರಕ್ಕೆ ತೊಂದರೆ ಉಂಟು ಮಾಡಿದ್ದಾರೆ. ಪ್ರಶ್ನಿಸಿದರೆ, ಇದು ರಸ್ತೆ ಅಲ್ಲ, ನಮ್ಮ ಜಮೀನು ಎಂದು ಹೇಳುತ್ತಿದ್ದಾರೆ ಎಂದು ದೂರಿದರು.

ಇತ್ತೀಚೆಗೆ ರಸ್ತೆಯ ಒಂದು ಭಾಗವನ್ನು ಸಿಮೆಂಟ್ ರಸ್ತೆಯನ್ನಾಗಿ ಅಭಿವೃದ್ಧಿಪಡಿಸಲಾಗಿದೆ. ಹೆಲ್ತ್ ಲೇಔಟ್ ಕ್ರಾಸ್‌ನಿಂದ ನಂದಿನಿ ಬಡಾವಣೆ ಹಾಗು ಹೆಲ್ತ್ ಲೇಔಟ್‌ಗೆ ಸಂಪರ್ಕ ಕಲ್ಪಿಸುವ ಹಳೆಯ ಡಾಂಬರು ರಸ್ತೆಯ ಬದಲಿಗೆ ಸಿಮೆಂಟ್ ರಸ್ತೆ ಕಾಮಗಾರಿಯೂ ಆರಂಭವಾಗಿತ್ತು. ಈ ರಸ್ತೆಯಲ್ಲಿ ಪ್ರತಿದಿನ ಶಾಲಾ-ಕಾಲೇಜು ವಿದ್ಯಾರ್ಥಿಗಳು, ಸಾರ್ವಜನಿಕರು ಸೇರಿ ಸಾವಿರಾರು ಮಂದಿ ಸಂಚರಿಸುತ್ತಿದ್ದು, ರಸ್ತೆ ಬಗೆದಿರುವುದರಿಂದ ತೀವ್ರ ತೊಂದರೆ ಎದುರಾಗಿದೆ. ಈ ಬಗ್ಗೆ ಪ್ರಶ್ನಿಸಲು ತೆರಳಿದ ನಿವಾಸಿಗಳೊಂದಿಗೆ ಸ್ವಾಮಿ ಹಾಗು ಅವರ ಬೆಂಬಲಿಗರು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ ಎಂದು ಆರೋಪಿಸಿದರು.

## ಇಂದು ಬ್ರಹ್ಮಶ್ರೀ ನಾರಾಯಣಗುರು ಜಯಂತಿ



**ಹಾಸನ:** ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಬ್ರಹ್ಮಶ್ರೀ ನಾರಾಯಣ ಗುರು ಜಯಂತಿ ಕಾರ್ಯಕ್ರಮವನ್ನು ಆ.28 ರಂದು ಬೆಳಿಗ್ಗೆ 11 ಗಂಟೆಗೆ ಹಾಸನಾಂಬ ಕಲಾಕ್ಷೇತ್ರದಲ್ಲಿ ಆಯೋಜಿಸಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ. ಶಿವಲಿಂಗೇಗೌಡ ಅವರು ಕಾರ್ಯಕ್ರಮ ಉದ್ಘಾಟನೆ ಮಾಡಲಿದ್ದಾರೆ, ಶಾಸಕ ಸ್ವರೂಪ್ ಪ್ರಕಾಶ್ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಸಂಸದ ಶ್ರೇಯಸ್ ಎಂ.ಪಟೇಲ್ ಭಾಗವಹಿಸುವರು.

ಹೊಳೆನರಸೀಪುರ ಕ್ಷೇತ್ರ ಸಂಪನ್ಮೂಲ ವ್ಯಕ್ತಿ ಮತ್ತು ಸಾಹಿತಿಗಳಾದ ಎಂ.ಜಿ ಪರಮೇಶ್ ಮಡಬಲು ಅವರು ಉಪನ್ಯಾಸ ನೀಡಲಿದ್ದಾರೆ.

# ಸಕಾಲದಲ್ಲಿ ಸಾಲ ಮರುಪಾವತಿಸಿದರೆ ಬ್ಯಾಂಕ್ ಬೆಳವಣಿಗೆಗೆ ಸಹಕಾರಿ

## ಪ್ರಸಕ್ತ ಸಾಲಿನಲ್ಲಿ 20 ಲಕ್ಷ ರೂ. ನಿವ್ವಳ ಲಾಭ: ಅಧ್ಯಕ್ಷ ಮಂಜುನಾಥ್

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ರೈತರ ಪಡೆದ ಸಾಲವನ್ನು ಸಕಾಲದಲ್ಲಿ ಮರುಪಾವತಿ ಮಾಡುವುದನ್ನು ರೂಢಿಸಿಕೊಂಡಲ್ಲಿ ಇದರಿಂದ ಬ್ಯಾಂಕ್ ಬೆಳವಣಿಗೆಯಾಗುವುದರ ಜೊತೆಗೆ ರೈತರಿಗೆ ಮತ್ತಷ್ಟು ಸಾಲ ನೀಡಲು ಹಣದ ಲಭ್ಯತೆಯಾಗಲಿದೆ ಎಂದು ಪಟ್ಟಣದ ಪೀಕಾರ್ಡ್ ಬ್ಯಾಂಕ್‌ನ ಅಧ್ಯಕ್ಷ ಬಿ.ಎನ್.ಮಂಜುನಾಥ್ ಅವರು ತಿಳಿಸಿದರು.



ಬ್ಯಾಂಕ್‌ನ ಆವರಣದಲ್ಲಿ ಗುರುವಾರ ನಡೆದ 2025-26ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ತಾಲ್ಲೂಕಿನ ಪೀಕಾರ್ಡ್ ಬ್ಯಾಂಕ್‌ನಿಂದ ಸಾವಿರಾರು ರೈತರಿಗೆ ಮಧ್ಯಮ ಮತ್ತು ದೀರ್ಘಾವಧಿ ಸಾಲಗಳನ್ನು ನೀಡುತ್ತಾ ಬರಲಾಗಿದೆ. ಬ್ಯಾಂಕ್ ಸುದೀರ್ಘ ಅವಧಿಗೆ ಉತ್ತಮವಾಗಿ ನಡೆಸಿಕೊಂಡು ಹೋಗಬೇಕಾದ್ದಲ್ಲಿ ಸುಸ್ತಿದಾರರು ಪಡೆದ ಸಾಲವನ್ನು ಸರಿಯಾಗಿ ಮರುಪಾವತಿ ಮಾಡಬೇಕು ಎಂದರು.

ಕಳೆದ ಎರಡ್ಮೂರು ವರ್ಷಗಳ ಹಿಂದೆ ಸಾಲ ಮರುಪಾವತಿ ಇಲ್ಲದೇ ಬ್ಯಾಂಕಿನ ವಹಿವಾಟು ನಿಷ್ಕ್ರೀಯವಾಗಿತ್ತು. ಎಲ್ಲ ನಿರ್ದೇಶಕರು ಸುಸ್ತಿದಾರರಾದ ರೈತರನ್ನು ಮನವೊಲಿಸಿ ಹಣ ಕಟ್ಟಿಸಿದ ಪರಿಣಾಮ ಬ್ಯಾಂಕ್ ಅಭಿವೃದ್ಧಿಯತ್ತ ಸಾಗಿದೆ ಎಂದು ತಿಳಿಸಿದರು.

ಸರ್ಕಾರ ಹೊಸ ರೈತರಿಗೆ ಸಾಲ ನೀಡುವ ಉದ್ದೇಶಕ್ಕಾಗಿ ಎರಡು ಅವಧಿಗೆ 10 ಕೋಟಿ ರೂ. ಹಣ ನೀಡಿತ್ತು, ಇದೀಗ 6 ಕೋಟಿ ರೂ. ನೀಡಿದೆ. ನಮ್ಮ ಖಾತೆಗೆ ಜಮೆಯಾಗುವುದಷ್ಟೇ ಬಾಕಿಯಿದೆ ಎಂದು ಹೇಳಿದರು.

ಈಗಾಗಲೇ ಸುಸ್ತಿದಾರರದವರಿಗೆ ಬಾಕಿ ಕಟ್ಟಿದ್ದಲ್ಲಿ ಪುನಃ ಸಾಲ ನೀಡುವ ಭರವಸೆಯನ್ನು ನೀಡಿರುವುದರಿಂದ ಮೊದಲಿಗೆ ಅವರಿಗೆ ಸಾಲ ನೀಡಿ ಉಳಿಕೆ ಹಣದಿಂದ ಹೊಸ ರೈತರಿಗೆ ಸಾಲ ನೀಡುವ ತೀರ್ಮಾನವನ್ನು ಆಡಳಿತ ಮಂಡಳಿ ಮಾಡಿದ್ದು, ರೈತರು ಸಹಕರಿಸಬೇಕೆಂದ ಅವರು, ಬ್ಯಾಂಕ್ ಪ್ರಸಕ್ತ ಸಾಲಿನಲ್ಲಿ 20 ಲಕ್ಷ ರೂ. ನಿವ್ವಳ ಲಾಭ ದಾಖಲಿಸಿದೆ. ಲಾಭದ ಹಣದಲ್ಲಿ ಪ್ರಾಧಿಕಾರದಿಂದ 345 ಚದರ ಮೀಟರ್ ಆಳತೆ ನಿವೇಶನವನ್ನು ಬ್ಯಾಂಕಿನ ಅಭಿವೃದ್ಧಿ ಉದ್ದೇಶಕ್ಕೆ ಖರೀದಿ ಮಾಡಲಾಗಿದೆ ಎಂದರು.

ಬ್ಯಾಂಕಿನ ಮಾಜಿ ಅಧ್ಯಕ್ಷ ಎಂ.ಶಂಕರ್ ಅವರು ಮಾತನಾಡಿ, ತಾಲ್ಲೂಕಿನ ಪಿಎಲ್.ಡಿ. ಬ್ಯಾಂಕಿನಿಂದ ಅತಿ ಹೆಚ್ಚು ರೈತರು ಸಾಲ ಪಡೆದು ಅಭಿವೃದ್ಧಿ ಸಾಧಿಸಿದ್ದಾರೆ. ಸಾಲ ಪಡೆದವರು ನಿಯಮಿತವಾಗಿ ಮರುಪಾವತಿಗೆ ಮುಂದಾಗಬೇಕು. ಪಡೆದ ಸಾಲವನ್ನು ಪಡೆದ ಉದ್ದೇಶಕ್ಕಷ್ಟೆ ಬಳಸಬೇಕು. ಇತರೆ ಬಳಕೆಗೆ ಮುಂದಾಗಬಾರದು ಎಂದ ಅವರು ಜಮೀನಿಗೆ ಮೌಲ್ಯ ಬಂದಿದ್ದು, ಭೂಮಿಯನ್ನು ಕಳೆಯದಂತೆ ಎಚ್ಚರ ವಹಿಸಬೇಕೆಂದು ಸಲಹೆ ನೀಡಿದರು.

ಆರಂಭದಲ್ಲಿ ಬ್ಯಾಂಕಿನ ವಾರ್ಷಿಕ ವರದಿಯನ್ನು ಬ್ಯಾಂಕಿನ ವ್ಯವಸ್ಥಾಪಕ ಎಂ.ಎಸ್. ಧರ್ಮ ಸಭೆಗೆ ಮಂಡಿಸಿದರು. ಪಡೆದ ಸಾಲವನ್ನು ಸರಿಯಾಗಿ ಮರುಪಾವತಿ ಮಾಡಿದ ರೈತರನ್ನು ಅಭಿನಂದಿಸಲಾಯಿತು.

ಈ ವೇಳೆ ಬ್ಯಾಂಕಿನ ಆಡಳಿತ ಮಂಡಳಿಯ ಉಪಾಧ್ಯಕ್ಷ ಎಂ.ಆರ್.ಮಂಜುನಾಥ್, ನಿರ್ದೇಶಕರಾದ ಎನ್.ಟಿ.ಬೊಮ್ಮೇಗೌಡ, ನಂಜುಂಡೇಗೌಡ, ಕೆ.ಟಿ.ನಟೇಶ್, ಕೆ.ಆರ್. ಬಾಬು, ಮಧುಕುಮಾರ್, ಕಿರಣ್ ಬೂಕ, ಎ.ಬಿ. ನಂಜುಂಡೇಗೌಡ, ಎಂ.ಎ.ಕುಮಾರ ಸ್ವಾಮಿ, ಕನ್ಯಾಕುಮಾರಿ, ಭಾರತಿಪಾಂಡು, ಯೋಜನಾ ಪ್ರಾಧಿಕಾರದ ಅಧ್ಯಕ್ಷ ಜಿ.ಆರ್.ಮೂರ್ತಿ ಸೇರಿ ಸಿಬ್ಬಂದಿಗಳಾದ ದೇವರಾಜ್, ಕುಮಾರಿ, ಶಿಲ್ಪ, ಸವಿತ, ಪುಟ್ಟೇಗೌಡ, ಜಯಮ್ಮ, ನವೀನ ಮತ್ತಿತರರು ಹಾಜರಿದ್ದರು.

## ಕೃಷಿ- ತೋಟಗಾರಿಕಾ ಬೆಳೆಗಳಲ್ಲಿ ಜೈವಿಕ ಗೊಬ್ಬರಗಳ ಮಹತ್ವದ ಕುರಿತು ಜಾಗೃತಿ

# ಜೈವಿಕ ಗೊಬ್ಬರಗಳಿಂದ ಸಸ್ಯಗಳಿಗೆ ಸಾರಜನಕ ಲಭ್ಯ

• ಪ್ರಜೋದಯ ವರದಿ

**ಹಾಸನ:** ಜೈವಿಕ ಗೊಬ್ಬರಗಳು ವಾತಾವರಣದಲ್ಲಿರುವ ಸಾರಜನಕವನ್ನು ಸಸ್ಯಗಳಿಗೆ ಲಭ್ಯವಾಗುವಂತೆ ಮಾಡುವುದರ ಜೊತೆಗೆ ಮಣ್ಣಿನಲ್ಲಿರುವ ಅಲಭ್ಯ ಪೋಷಕಾಂಶಗಳನ್ನು ಕರಗಿಸಿ ಬೆಳೆಗಳಿಗೆ ದೊರಕುವಂತೆ ಮಾಡುತ್ತವೆ. ಇದರಿಂದ ಸಸ್ಯಗಳ ಪೋಷಕಾಂಶ ಹೀರಿಕೊಳ್ಳುವ ಸಾಮರ್ಥ್ಯ ಹೆಚ್ಚುವುದಲ್ಲದೆ, ಮಣ್ಣಿನ ಆರೋಗ್ಯ ಮತ್ತು ಫಲವತ್ತತೆಯನ್ನು ಕಾಪಾಡಿಕೊಳ್ಳಲು ಸಹಾಯವಾಗುತ್ತದೆ ಎಂದು ಕೃಷಿ ಮಹಾವಿದ್ಯಾಲಯದ ಕೃಷಿ ಸೂಕ್ಷ್ಮಾಣು ಜೀವಿಶಾಸ್ತ್ರ ವಿಭಾಗ ಸಹಾಯಕ ಪ್ರಾಧ್ಯಾಪಕ ಡಾ.ಹೆಚ್.ಗುರುಮೂರ್ತಿ ಅವರು ತಿಳಿಸಿದರು.



ಚನ್ನರಾಯಪಟ್ಟಣ ತಾಲ್ಲೂಕಿನ ಚಿಕ್ಕಮತಿಘಟ್ಟ ಗ್ರಾಮದಲ್ಲಿ ''ಕೃಷಿ ಮತ್ತು ತೋಟಗಾರಿಕಾ ಬೆಳೆಗಳಲ್ಲಿ ಜೈವಿಕ ಗೊಬ್ಬರಗಳ ಪಾತ್ರ'' ಎಂಬ ವಿಷಯದ ಕುರಿತು ರೈತರಿಗೆ ಆಯೋಜಿಸಲಾಗಿದ್ದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯ, ಮಂಡ್ಯ ಹಾಗೂ ಕೃಷಿ ಮಹಾವಿದ್ಯಾಲಯ, ಕಾರೆಕೆರೆ, ಹಾಸನ ಇವರ ವತಿಯಿಂದ ಅಂತಿಮ ವರ್ಷದ ಕೃಷಿ ವಿದ್ಯಾರ್ಥಿಗಳ ಗ್ರಾಮೀಣ ಕೃಷಿ ಕಾರ್ಯಾನುಭವ ಶಿಬಿರದಲ್ಲಿ ಮಾತನಾಡಿದ ಅವರು, ಜೈವಿಕ ಗೊಬ್ಬರಗಳ ಮಹತ್ವ, ಬಳಕೆಯ ವಿಧಾನ ಹಾಗೂ ಅವುಗಳಿಂದ ಮಣ್ಣಿನ ಫಲವತ್ತತೆ ಮತ್ತು ಬೆಳೆಗಳ ಉತ್ಪಾದಕತೆಯ ಮೇಲೆ ಉಂಟಾಗುವ ಪರಿಣಾಮಗಳ ಕುರಿತು ರೈತರಿಗೆ ಸವಿಸ್ತಾರವಾದ ಮಾಹಿತಿ ನೀಡಿದರಲ್ಲದೆ, ರೈಜೋಬಿಯಂ, ಅಜೋಟೋಬ್ಯಾಕ್ಟರ್, ಅಜೋಸ್ಪಿರಿಲ್ಲಂ, ರಂಜಕ ಕರಗಿಸುವ ಬ್ಯಾಕ್ಟೀರಿಯಾ, ಪೊಟ್ಯಾಶಿಯಂ ಕರಗಿಸುವ ಸೂಕ್ಷ್ಮಜೀವಿಗಳು ಹಾಗೂ ಮೈಕೊರೈಜಾ ಮುಂತಾದ ವಿವಿಧ ಜೈವಿಕ ಗೊಬ್ಬರಗಳ ಕಾರ್ಯವಿಧಾನ ಮತ್ತು ಉಪಯೋಗಗಳನ್ನು ವಿವರಿಸಿದರು.

ಮುಖ್ಯವಾಗಿ ಧಾನ್ಯ, ದ್ವಿದಳ ಧಾನ್ಯ ಮತ್ತು ಎಣ್ಣೆಕಾಳು ಬೆಳೆಗಳು ಹಾಗೂ ತರಕಾರಿ, ಹಣ್ಣು ಮತ್ತು ಇತರೆ ತೋಟಗಾರಿಕಾ ಬೆಳೆಗಳಲ್ಲಿ ಜೈವಿಕ ಗೊಬ್ಬರಗಳ ಬಳಕೆಯ ಕುರಿತು ಪ್ರಾಯೋಗಿಕ ಮಾಹಿತಿಯನ್ನು ನೀಡಲಾಯಿತು. ರಾಸಾಯನಿಕ ಗೊಬ್ಬರಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವುದು, ಉತ್ಪಾದನಾ ವೆಚ್ಚವನ್ನು ತಗ್ಗಿಸುವುದು ಹಾಗೂ ಪರಿಸರ ಸ್ನೇಹಿ ಕೃಷಿಯನ್ನು ಉತ್ತೇಜಿಸುವಲ್ಲಿ ಜೈವಿಕ ಗೊಬ್ಬರಗಳ ಪಾತ್ರದ ಬಗ್ಗೆ ತಿಳಿಸಿದರು.

ಜೈವಿಕ ಗೊಬ್ಬರಗಳ ಆಯ್ಕೆ, ಸಂಗ್ರಹಣೆ, ಬೀಜೋಪಚಾರ, ಮಣ್ಣಿಗೆ ನೀಡುವ ವಿಧಾನ ಮತ್ತು ಬಳಕೆಯ ಸಂದರ್ಭದಲ್ಲಿ ಕೈಗೊಳ್ಳಬೇಕಾದ ಮುನ್ನೆಚ್ಚರಿಕೆಗಳ ಕುರಿತು ರೈತರಿಗೆ ವಿವರಿಸಲಾಯಿತು. ಜೈವಿಕ ಗೊಬ್ಬರಗಳನ್ನು ನೇರ ಸೂರ್ಯನ ಬೆಳಕು ಮತ್ತು ಹೆಚ್ಚಿನ ತಾಪಮಾನದಿಂದ ದೂರವಿಟ್ಟು ಸೂಕ್ತ ರೀತಿಯಲ್ಲಿ ಸಂಗ್ರಹಿಸುವ ಅಗತ್ಯವನ್ನು ತಿಳಿಸಲಾಯಿತು.

ಕಾರ್ಯಕ್ರಮದಲ್ಲಿ ರೈತರು ಸಕ್ರಿಯವಾಗಿ ಭಾಗವಹಿಸಿ ವಿವಿಧ ಬೆಳೆಗಳಲ್ಲಿ ಜೈವಿಕ ಗೊಬ್ಬರಗಳ ಬಳಕೆಯ ಕುರಿತು ತಮ್ಮ ಸಂದೇಹಗಳನ್ನು ನಿವಾರಿಸಿಕೊಂಡರು. ಸಮಗ್ರ ಪೋಷಕಾಂಶ ನಿರ್ವಹಣೆಯ ಭಾಗವಾಗಿ ಸಾವಯವ ಗೊಬ್ಬರ, ಜೈವಿಕ ಗೊಬ್ಬರ ಮತ್ತು ರಾಸಾಯನಿಕ ಗೊಬ್ಬರಗಳನ್ನು ಸಮತೋಲನದಿಂದ ಬಳಸುವಂತೆ ರೈತರನ್ನು ಪ್ರೋತ್ಸಾಹಿಸಲಾಯಿತು.

ಕಾರ್ಯಕ್ರಮವು ಮಣ್ಣಿನ ಆರೋಗ್ಯ ಸಂರಕ್ಷಣೆ, ಉತ್ಪಾದನಾ ವೆಚ್ಚ ಕಡಿತ, ಪರಿಸರ ಸಂರಕ್ಷಣೆ ಹಾಗೂ ಸುಸ್ಥಿರ ಕೃಷಿ ಮತ್ತು ತೋಟಗಾರಿಕಾ ಉತ್ಪಾದನೆ ಸಾಧಿಸುವಲ್ಲಿ ಜೈವಿಕ ಗೊಬ್ಬರಗಳ ಮಹತ್ವವನ್ನು ರೈತರಿಗೆ ಮನವರಿಕೆ ಮಾಡಿಕೊಡುವ ಮೂಲಕ ಯಶಸ್ವಿಯಾಗಿ ಸಂಪನ್ನಗೊಂಡಿತು.

ಗ್ರಾಮದ ಮಹಿಳೆಯರು, ಮಕ್ಕಳು ಹಾಗೂ ರೈತರು ಭಾಗವಹಿಸಿದ್ದರು.

# ಪ್ರಧಾನಿ ಭೇಟಿಯಾದ ಹೆಚ್.ಡಿ.ಕೆ., ನಿಖಿಲ್

• ಪ್ರಜೋದಯ ವರದಿ

**ನವದೆಹಲಿ:** ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ವಿವಿಧ ಅಭಿವೃದ್ಧಿ ವಿಷಯ ಹಾಗು ಕರ್ನಾಟಕದಲ್ಲಿ ಎನ್‌ಡಿಎ ಮೈತ್ರಿಯನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಚರ್ಚಿಸಿ ಮಾರ್ಗದರ್ಶನ ಪಡೆಯಲಾಯಿತು ಎಂದು ಕೇಂದ್ರದ ಬೃಹತ್ ಕೈಗಾರಿಕೆ ಹಾಗು ಉಕ್ಕು ಖಾತೆ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ತಿಳಿಸಿದ್ದಾರೆ.



ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿ, ಬೃಹತ್ ಕೈಗಾರಿಕೆ ಹಾಗು ಉಕ್ಕು ಸಚಿವಾಲಯಗಳು ಕೈಗೊಂಡಿರುವ ಪರಿವರ್ತನಾತ್ಮಕ ಕ್ರಮಗಳನ್ನು ವಿವರಿಸಲಾಯಿತು. ಈ ಸಂದರ್ಭದಲ್ಲಿ ಪ್ರಧಾನಿ ಅವರು ತೋರಿದ ಪ್ರೀತಿ, ವಿಶ್ವಾಸಕ್ಕೆ ನಾವು ಅಭಾರಿಯಾಗಿದ್ದೇವೆಂದು ತಮ್ಮ ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿದ್ದಾರೆ.

ಪ್ರಧಾನಿಯವರ ಭೇಟಿ ಸಂದರ್ಭದಲ್ಲಿ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷರ ನಿಖಿಲ್ ಕುಮಾರಸ್ವಾಮಿ ಇದ್ದರು. ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ಬುಧವಾರ ಬಿಜೆಪಿ ರಾಜ್ಯ ಉಸ್ತುವಾರಿ ಡಾ. ರಾಧಾಮೋಹನ್ ದಾಸ್ ಅಗರವಾಲ್ ಅವರೊಂದಿಗೆ ಉಭಯ ಪಕ್ಷಗಳ ಸಮನ್ವಯ ಹಾಗು ಮುಂಬರುವ ಚುನಾವಣೆಯ ಬಗ್ಗೆ ಸಮಾಲೋಚನೆ ನಡೆಸಿದ್ದರು.

ಪ್ರಧಾನಿ ಭೇಟಿ ಕುರಿತು ನಿಖಿಲ್ ಕುಮಾರಸ್ವಾಮಿ ಎಕ್ಸ್ ಖಾತೆಯಲ್ಲಿ ಪೋಸ್ಟ್ ಹಂಚಿಕೊಂಡಿದ್ದು, ಪ್ರಧಾನಿ ನರೇಂದ್ರ ಮೋದಿ ಅವರನ್ನು ಪ್ರಥಮ ಬಾರಿಗೆ ವೈಯಕ್ತಿಕವಾಗಿ ಭೇಟಿಯಾದ ಕ್ಷಣ ನನ್ನ ರಾಜಕೀಯ ಪಯಣದ ಸ್ಮರಣೀಯ ಅನುಭವ ಎಂದಿದ್ದಾರೆ.

ಬಾಲಕನಿದ್ದಾಗ ತಾತ ಹೆಚ್.ಡಿ. ದೇವೇಗೌಡ ಅವರು ದೇಶವನ್ನು ಮುನ್ನಡೆಸಿದ್ದನ್ನು ನೋಡಿದ್ದ ನನಗೆ ಇಂದು ಎನ್.ಡಿ.ಎ. ಒಕ್ಕೂಟದ ಸಹಭಾಗಿಯಾಗಿ ಮೋದಿ ಅವರ ಜೊತೆ ನಿಂತಾಗ ಅದೊಂದು ಸಾರ್ಥಕ ಭಾವ ತಂದಿದೆ.

ಅವರಲ್ಲಿದ್ದ ಪ್ರಭಾವಿ ತೇಜಸ್ಸು, ಕರುನಾಡು ಹಾಗು ದೇಶದ ಭವಿಷ್ಯದ ಮೇಲಿರುವ ಅಪಾರ ಕಾಳಜಿ ಅತ್ಯಂತ ಪ್ರೇರಣಾದಾಯಿಕ. ಮಾತಿನಲ್ಲಿ ಅಪಾರ ಪ್ರೀತಿ, ನಾಡಿನ ಹಿತದಲ್ಲಿ ರಾಜಿ ಇಲ್ಲದ ನಾಯಕತ್ವ. ನಾಯಕತ್ವ ಎಂದರೆ ಕೇವಲ ಆಡಳಿತವಲ್ಲ, ಭವಿಷ್ಯವನ್ನು ಕಟ್ಟುವುದು ಎಂಬುದಕ್ಕೆ ಇಂದಿನ ಭೇಟಿಯೇ ಸಾಕ್ಷಿ ಎಂದು ಉಲ್ಲೇಖಿಸಿದ್ದಾರೆ.

## ಯೋಗಾಸನ

**ಆಲೂರು:** ಲಯನ್ಸ್ ಸೇವಾ ಸಂಸ್ಥೆ ಆಲೂರು ಮತ್ತು ಕೆ. ಹೊಸಕೋಟೆ ಸಂಯುಕ್ತಾಶ್ರಯದಲ್ಲಿ ಆರೋಗ್ಯಕ್ಕಾಗಿ ಯೋಗಾಸನ, ಪ್ರಾಣಾಯಾಮ ಮತ್ತು ಜ್ಞಾನ ಶಿಬಿರವು ಸೆ.9 ರ ವರೆಗೆ ಬೆಳಿಗ್ಗೆ 5.20 ಗಂಟೆಯಿಂದ 7 ರವರೆಗೆ ಬಿಕ್ಕೋಡು ರಸ್ತೆಯಲ್ಲಿರುವ ಲಯನ್ಸ್ ಭವನದಲ್ಲಿ ನಡೆಯಲಿದೆ.

ಆಸಕ್ತರು ಪಾಲ್ಗೊಂಡು ಶಿಬಿರ ಸದುಪಯೋಗ ಪಡಿಸಿಕೊಳ್ಳಬೇಕೆಂದು ಲಯನ್ಸ್ ಸೇವಾ ಸಂಸ್ಥೆ ಅಧ್ಯಕ್ಷ ಆನಂದ್ ಅವರು ತಿಳಿಸಿದ್ದಾರೆ.

CHANGE OF NAME

I,YOGA N S, S/O SANNAIAH, Residing at #,Mansur,Bidrahalli Hobli,Virgonagar Post,Bangalore-560049, Have Changed My Son Name as **N Y SRIKANTH to VIKESH N Y** For all purposes, vide affidavit dated 25-08-2026 swaron before Notary **Thippeswamy T,** Bangalore

# ಜಲ ಆಸ್ತಿ ಸಂರಕ್ಷಣೆಗೆ ಜಿಐಎಸ್ ಆಧರಿತ ಆ್ಯಪ್

## ಸಚಿವ ಈಶ್ವರ್ ಖಂಡ್ರೆ ಲೋಕಾರ್ಪಣೆ | 3 ಲಕ್ಷ ಆಸ್ತಿ ಡಿಜಿಟಲೀಕರಣಕ್ಕೆ ಕ್ರಮ

• ಪ್ರಜೋದಯ ವರದಿ




**ಬೆಂಗಳೂರು:** ಗ್ರಾಮೀಣ ಜಲ ಆಸ್ತಿಗಳ ವೈಜ್ಞಾನಿಕ ನಿರ್ವಹಣೆ ಮತ್ತು ನಕಲಿ ಬಿಲ್‌ಗಳಿಗೆ ಕಡಿವಾಣ ಹಾಕಲು ಭೌಗೋಳಿಕ ಮಾಹಿತಿ ವ್ಯವಸ್ಥೆ (ಜಿಐಎಸ್) ಆಧರಿತ ಮೊಬೈಲ್ ಮತ್ತು ವೆಬ್ ಅಪ್ಲಿಕೇಷನ್ ಅನುಷ್ಠಾನಗೊಳಿಸಲಾಗಿದೆಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಖಂಡ್ರೆ ಅವರು ಹೇಳಿದರು.

ಗ್ರಾಮೀಣ ನೀರು ಸರಬರಾಜು ಮತ್ತು ಮೂಲಸೌಕರ್ಯದ ಸುಸ್ಥಿರ ಮತ್ತು ವೈಜ್ಞಾನಿಕ ನಿರ್ವಹಣೆಗಾಗಿ ಸಿದ್ದಪಡಿಸಲಾಗಿರುವ ಮೊಬೈಲ್ ಮತ್ತು ವೆಬ್ ಅಪ್ಲಿಕೇಷನ್ ಅನ್ನು ಗುರುವಾರ ಜನಾರ್ಪಣೆ ಮಾಡಿ ಮಾತನಾಡಿದ ಅವರು, ಎಲ್ಲಾ ಗ್ರಾಮೀಣ ಆಸ್ತಿಗಳನ್ನೂ ಜಿಯೋ ಟ್ಯಾಗ್ ಮಾಡಿ ಪಾರದರ್ಶಕತೆ ತರಲಾಗುವುದೆಂದರು.

ರಾಜ್ಯದಲ್ಲಿ 3 ಲಕ್ಷಕ್ಕೂ ಅಧಿಕ ಜಲ ಆಸ್ತಿಗಳಿದ್ದು ಎಲ್ಲವನ್ನೂ ಸೆಪ್ಟೆಂಬರ್ ಅಂತ್ಯದೊಳಗೆ ಡಿಜಿಟಲೀಕರಿಸಲಾಗುವುದು. ಈಗಾಗಲೇ ಮೊದಲ ಹಂತದ ಪರಿಶೀಲನೆ ಅಡಿಯಲ್ಲಿ ಈ ವರೆಗೆ 70 ಸಾವಿರಕ್ಕೂ ಅಧಿಕ ಜಲ ಸ್ವತ್ತುಗಳ ದಾಖಲೀಕರಣ ಮಾಡಲಾಗಿದೆ ಎಂದು ಈಶ್ವರ ಖಂಡ್ರೆ ತಿಳಿಸಿದರು.

ಆ ವ್ಯವಸ್ಥೆಯಡಿ 3 ಹಂತದ ಪರಿಶೀಲನೆ ನಡೆಯಲಿದ್ದು, ಮೊದಲ ಹಂತದಲ್ಲಿ ಸಹಾಯಕ ಇಂಜಿನೀಯರ್, ಕಿರಿಯ ಇಂಜಿನೀಯರ್ ಮತ್ತು ಸಪೋರ್ಟ್ ಇಂಜಿನೀಯರ್‌ಗಳು ನೂರಕ್ಕೆ 100ರಷ್ಟು ಜಲ ಆಸ್ತಿಯ ಖುದ್ದು ಪರಿಶೀಲನೆ ನಡೆಸಲಿದ್ದಾರೆ. 2ನೇ ಹಂತದಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನೀಯರ್‌ಗಳು ಶೇ.5ರಷ್ಟು ಆಸ್ತಿಯ ಪರಿಶೀಲನೆ ಮಾಡುತ್ತಾರೆ. ಈ ಹಂತದಲ್ಲಿ ಲೋಪ ಕಂಡು ಬಂದಲ್ಲಿ ಸಂಬಂಧಿತ ಗುತಿಗೆದಾರರು, ಇಂಜಿನೀಯರ್‌ಗಳನ್ನು ಹೊಣೆ ಮಾಡಲಾಗುವುದೆಂದರು. ಮೂರನೇ ಹಂತದಲ್ಲಿ ಕಾರ್ಯಪಾಲಕ ಇಂಜಿನೀಯರ್ ಶೇ.2ರಷ್ಟು ಆಸ್ತಿಯ ಯಾದೃಚ್ಛಿಕ ಪರಿಶೀಲನೆ ನಡೆಸುತ್ತಾರೆ. 3 ಹಂತದ ತಪಾಸಣೆ ನಡೆಯುವ ಕಾರಣ ಗುತ್ತಿಗೆದಾರರಿಗೆ ಮತ್ತು ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆ ಅನುಷ್ಠಾನ ಮಾಡುವ ಕೆಳ ಹಂತದ ಅಧಿಕಾರಿಗಳಲ್ಲಿ ಹೊಣೆಗಾರಿಕೆ ಹೆಚ್ಚುತ್ತದೆ ಮತ್ತು ಇದು ಪಾರದರ್ಶಕತೆ ತರಲು ಸಹಕಾರಿಯಾಗುತ್ತದೆಂದರು.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಕರ್ನಾಟಕ ದೂರ ಸಂವೇದಿ ಅನ್ವಯಿಕ ಕೇಂದ್ರ ಸಹಯೋಗದಲ್ಲಿ ಈ ಮೊಬೈಲ್ ಮತ್ತು ವೆಬ್ ತಂತ್ರಾಂಶವನ್ನು ಅಭಿವೃದ್ಧಿ ಪಡಿಸಿದೆ ಎಂದು ತಿಳಿಸಿದ ಈಶ್ವರ ಖಂಡ್ರೆ, ಇದು ಎಲ್ಲಾ ಕಾಮಗಾರಿ ಮತ್ತು ಜಲ ಆಸ್ತಿಗಳನ್ನು 5 ಮೀಟರ್ ನಿಖರತೆಯೊಂದಿಗೆ ಜಿಯೋ ಟ್ಯಾಗ್ ಮಾಡಲು ನೆರವಾಗುತ್ತದೆಂದರು.

ಅದರಿಂದ ಕಾಮಗಾರಿಯನ್ನೇ ಮಾಡದೆ ನಕಲಿ ಬಿಲ್ ಮಾಡಲು ಅವಕಾಶ ಇರುವುದಿಲ್ಲ ಮತ್ತು ಸೃಜಿಸಲಾದ ಆಸ್ತಿಯ ಗುಣಮಟ್ಟದ ಪರೀಕ್ಷೆಗೂ ಸಹಕಾರಿಯಾಗುತ್ತದೆ. ಎಲ್ಲಾ ಜಲ ಆಸ್ತಿಗಳ ಮೂಲ ಮಾಹಿತಿ, ಅವುಗಳ ಭೌತಿಕ ಸ್ಥಿತಿ, ಕಾರ್ಯಾಚರಣೆ, ನಿರ್ವಹಣೆಯ ಸ್ಥಿತಿಗತಿ ಈ ಆ್ಯಪ್‌ನಲ್ಲಿ ದಾಖಲಾಗುವ ಕಾರಣ ಸರ್ಕಾರದ ಯೋಜನೆ ತಳಮಟ್ಟದಲ್ಲಿ ಪರಿಣಾಮಕಾರಿ ಅನುಷ್ಠಾನಗೊಳ್ಳುತ್ತದೆಂಬ ವಿಶ್ವಾಸ ವ್ಯಕ್ತಪಡಿಸಿದರು.

ಈ ಆ್ಯಪ್‌ನಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ವತಿಯಿಂದ ಕೊರೆಸಲಾಗುವ ಬೋರ್‌ವೆಲ್, ನಿರ್ಮಿಸಲಾಗುವ ಓವರ್ ಹೆಡ್ ಟ್ಯಾಂಕ್, ತೆರೆದ ಬಾವಿ, ಪಂಪ್ ಹೌಸ್, ಜಲ ಶುದ್ಧೀಕರಣ ಘಟಕ, ಸಮತೋಲಿತ ಕೆರೆಗಳು, ಸರೋವರ, ಪ್ರಯೋ ಗಾಲಯ, ಕೈ ಪಂಪ್ ಇತ್ಯಾದಿಗಳನ್ನು ಕಡ್ಡಾಯವಾಗಿ ಜಿಯೋ ಟ್ಯಾಗ್ ಮಾಡಲು ಸೂಚಿಸಲಾ ಗಿದೆ ಎಂದು ತಿಳಿಸಿದರು.

ಈಗಾಗಲೇ ಗ್ರಾಮೀಣ ಭಾಗದಲ್ಲಿ ಸೃಜಿಸಲಾಗಿರುವ ಕುಡಿಯುವ ನೀರಿನ ಆಸ್ತಿಗಳನ್ನು ಮೊದಲಿಗೆ ಜಿಯೋ ಟ್ಯಾಗ್ ಮಾಡಿ ದಾಖಲೀಕರಣ ಮಾಡಬೇಕು. ನಂತರ ಹೊಸ ಮತ್ತು ಪ್ರಗತಿಯಲ್ಲಿರುವ ಕಾಮಗಾರಿಗಳ ಜಿಯೋ ಟ್ಯಾಗ್ ಮಾಡಬೇಕೆಂದು ಸೂಚಿಸಲಾಗಿದೆ ಎಂದರು.

**ತಪಾಸಣೆ ಚುರುಕು**

ಜೊತೆಗೆ ಕೊಳವೆ ಬಾವಿ ಕೊರೆದಿರುವ ಬಗ್ಗೆ ಜಿಯೋ ಟ್ಯಾಗ್ ಮಾಡುವ ಕಾರಣ ಮೂರನೇ ವ್ಯಕ್ತಿಯಿಂದ ತಪಾಸಣೆ ಮಾಡಿಸಿದಾಗ ಎಷ್ಟು ಅಡಿ ಕೊಳವೆ ಬಾವಿ ಕೊರೆದಿದ್ದಾರೆ, ಎಷ್ಟು ಆಳಕ್ಕೆ ಪೈಪ್ ಅಳವಡಿಸಿದ್ದಾರೆ. ಎಷ್ಟು ಹೆಚ್.ಪಿ. ಮೋಟಾರ್ ಅಳವಡಿಸಿದ್ದಾರೆಂಬ ಎಲ್ಲಾ ಮಾಹಿತಿ ಜಿಯೋ ಟ್ಯಾಗ್ ಆಗಿ ದಾಖಲಾಗುವ ಕಾರಣ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಬಹುದೆಂದು ಸಚಿವರು ತಿಳಿಸಿದರು. ಇಲಾಖೆಯಲ್ಲಿ ಪಾರದರ್ಶಕತೆ ತರುವ ಮೂಲಕ ಗ್ರಾಮೀಣ ಕುಡಿಯುವ ನೀರಿನ ಯೋಜನೆಗಳನ್ನು ಹೆಚ್ಚು ಜನಸ್ನೇಹಿಯಾಗಿ ಮಾಡುವುದು ಇಲಾಖೆಯ ಉದ್ದೇಶವಾಗಿದ್ದು, ಈ ಹೊಸ ಆ್ಯಪ್ ಬಗ್ಗೆ ಸಂಬಂಧಿತ ಅಧಿಕಾರಿಗಳಿಗೆ ತರಬೇತಿಯನ್ನೂ ಕೊಡಿಸಲಾಗಿದೆ ಎಂದು ಈಶ್ವರ ಖಂಡ್ರೆ ತಿಳಿಸಿದರು.

ಬತ್ತಿ ಹೋಗಿರುವ ಕೊಳವೆ ಬಾವಿಗಳ ಮರುಪೂರಣಕ್ಕೆ ವಿಬಿಜಿ ರಾಮ್ ಜಿ ಅಡಿಯಲ್ಲಿ ಕ್ರಮ ವಹಿಸಲು ಸೂಚಿಸಲಾಗಿದೆ. 7,700 ಕೊಳವೆ ಬಾವಿಗಳನ್ನು ಈ ವರೆಗೆ ಮರು ಪೂರಣ (ರೀ ಚಾರ್ಜ್) ಮಾಡಲಾಗಿದೆ. ರಾಜ್ಯದಲ್ಲಿ ಸರ್ಕಾರದ ವತಿಯಿಂದ ಎಷ್ಟು ಕೊಳವೆ ಬಾವಿ ಕೊರೆ ಯಲಾಗಿದೆ. ಎಷ್ಟು ನಿಷ್ಕ್ರಿಯವಾಗಿದೆ. ಎಷ್ಟು ಮರುಪೂರಣಕ್ಕೆ ಅರ್ಹವಾಗಿವೆ ಎಂಬ ಮಾಹಿತಿ ಕಲೆಹಾಕಿ, ಕಾರ್ಯಸಾಧ್ಯವಾದ ಕೊಳವೆ ಬಾವಿಗಳ ಮರುಪೂರಣಕ್ಕೆ ಸೂಚನೆ ನೀಡಲಾಗಿದೆ ಎಂದರು.

### ಉದ್ಯೋಗ ಖಾತ್ರಿ ಗುರಿ

ಮಹಾತ್ಮ ಗಾಂಧೀ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ 187 ಕೋ.ರೂ. ಮಾನವ ದಿನ ಸೃಜನೆ ಮಾಡಲಾಗಿತ್ತು. ಆಗ ಕೇಂದ್ರ ಸರ್ಕಾರ ಶೇ.90ರಷ್ಟು ರಾಜ್ಯ ಸರ್ಕಾರ ಶೇ.10ರಷ್ಟು ಭರಿಸುತ್ತಿತ್ತು. ಈಗ ಶೇ.40ರಷ್ಟು ಹಣವನ್ನು ರಾಜ್ಯ ಸರ್ಕಾರವೇ ಭರಿಸಬೇಕಾಗಿದೆ. ಈಗ ಪೂರಕ ಅಂದಾಜಿನಲ್ಲಿ 3800 ಕೋ.ರೂ. ನೀಡಲಾಗಿದೆ. ಕೇಂದ್ರ ಸರ್ಕಾರದಿಂದ 5709 ಕೋ. ರೂ. ಬರಲಿದ್ದು, ಯಾರೊಬ್ಬರೂ ಗುಳೆ ಹೋಗದಂತೆ ಗ್ರಾಮೀಣ ಜನರಿಗೆ ಉದ್ಯೋಗ ನೀಡಲು ಕ್ರಮ ವಹಿಸಲಾಗಿದೆ. ಆರಂಭದಲ್ಲಿ 50 ಸಾವಿರ ಮಾನವ ದಿನ ಸೃಜನೆಯಾಗಿತ್ತು. ಈಗ 3 ಲಕ್ಷಕ್ಕೂ ಅಧಿಕ ಮಾನವ ದಿನ ಸೃಜನೆಯಾಗುತ್ತಿದೆ. ಜು.1ರಿಂದ ಇಲ್ಲಿಯವರೆಗೆ 74 ಲಕ್ಷ 77 ಸಾವಿರ ಮಾನವ ದಿನ ಸೃಜನೆಯಾಗಿದೆ. ನಿತ್ಯ 5 ಲಕ್ಷ ಮಾನವ ದಿನ ನಮ್ಮ ಗುರಿಯಾಗಿದೆ ಎಂದರು.

# ಸಾಂಸ್ಕೃತಿಕ ಪರಂಪರೆ ಭವಿಷ್ಯದ ಪೀಳಿಗೆಗೆ ಉಳಿಯಲಿ

» ಮೊದಲನೇ ಪುಟದಿಂದ

ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಅವರು ಮಾತನಾಡಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಗ್ರಾಮೀಣ ಭಾಗದ ಉದಯೋನ್ಮುಖ ಕಲಾವಿದರನ್ನು ಮುನ್ನೆಲೆಗೆ ತರಲು ಮತ್ತು ಅವರ ಕಲೆಗೆ ಸೂಕ್ತ ವೇದಿಕೆ ಕಲ್ಪಿಸಲು ನಿರಂತರವಾಗಿ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿದೆ. ಹಳ್ಳಿ ಬದುಕಿನಲ್ಲಿ ಜನಪದ ಮೂಡಿದೆ. ಬೆವರಿನ ಸಂಸ್ಕೃತಿಯೇ ಜನಪದ ಸಂಸ್ಕೃತಿ. ದುಡಿಯುತ್ತಾ ದುಡಿಯುತ್ತಾ ನಮ್ಮ ಪೂರ್ವಜರು ಬದುಕು ಕಟ್ಟಿಕೊಳ್ಳುವ ಬಗ್ಗೆ ತಮ್ಮ ಅನುಭವದ ಮೂಲಕ ಮಾತ್ರ ಸ್ಥಾನದಲ್ಲಿರುವ ಜಾನಪದ ಕಲೆ ಹೆಣೆದರು. ಜಾನಪದ ಸಂಸ್ಕೃತಿ ಅಳಿದರೆ ನಮ್ಮತನವನ್ನು ನಾವು ಕಳೆದುಕೊಂಡಂತೆ. ಜಾನಪದ ಸೊಗಡಿನಲ್ಲೇ ಭಾರತೀಯ ಮೂಲ ಪರಂಪರೆಯ ಸತ್ವ ಅಡಗಿದೆ. ಹೀಗಾಗಿ ಆಧುನಿಕತೆಯ ಭರಾಟೆಗೆ ಸಿಲುಕಿ ಇಂತಹ ಮಾತ್ರ ಸಂಸ್ಕೃತಿ ಅಳಿಯಲು ಬಿಡಬಾರದೆಂದು ಸಲಹೆ ನೀಡಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಡಾ.ಎಚ್.ಎಲ್. ಮಲ್ಲೇಶಗೌಡ ಅವರು ಮಾತನಾಡಿ, ಜಾನಪದ ಕಲೆಗಳು ದೇಶದ ಸಂಸ್ಕೃತಿಯ ಪ್ರತಿಬಿಂಬವಾಗಿವೆ. ನಮ್ಮ ಸಂಸ್ಕೃತಿ ಹಾಗು ದೇಶಿಯ ಸೊಗಡಾಗಿರುವ ಇವು ನಮ್ಮ ನಾಗರಿಕತೆಯ ಸಂಕೇತ. ಈ ಕಲೆಗಳನ್ನು ಉಳಿಸಿ ಬೆಳಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವೆಂದರು.

ಜನಪದ ಹಾಡು, ನೃತ್ಯ, ಬೀಸುಕಲ್ಲಿನ ಪದ, ಜೊಗುಳ ಪದ ಇಂತಹ ಅನೇಕ ಹಾಡು ಕುಣಿತಗಳು ಕೃಷಿ ಬದುಕು ಹಾಗು ಹಳ್ಳಿ ಬದುಕಿನಲ್ಲಿ ಮೂಡಿಬಂದ ಅತ್ಯದ್ಭುತ ಕಲೆಗಳಾಗಿವೆ. ಇವುಗಳಲ್ಲಿ ದೇಸಿಯ ಸೊಗಡಿನ ಜೊತೆಗೆ ಸಮಾಜದ ಅಂತಕರಣ ಅಡಗಿದೆ. ಜನಪದರು ತಮ್ಮ ಅನುಭಾವದ ನೆಲೆಯ ಮೇಲೆ ಜನಪದ ಗೀತೆಗಳನ್ನು ರಚಿಸಿದ್ದಾರೆ. ಅವುಗಳ ಅನುಕರಣೆ ಇಂದಿನ ಪೀಳಿಗೆಗೆ ಅವಶ್ಯಕವಾಗಿದೆ. ಸಿನಿಮೀಯ ಬದುಕು ಬಿಟ್ಟು ದೇಶಿ ಸಂಸ್ಕೃತಿಯಲ್ಲಿ ತೊಡಗಿಸಿಕೊಳ್ಳಲು ಯುವ ಸೌರಭ ಸಹಕಾರಿಯಾಗಲಿ ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಹೆಚ್.ಪಿ. ತಾರಾನಾಥ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಜಿ.ಆರ್.ರಂಜಿತ್, ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಬಿ.ಪಿ. ಕೃಷ್ಣೇಗೌಡ, ಪಶು ಆಸ್ಪತ್ರೆಯ ಸಹಾಯಕ ನಿರ್ದೇಶಕ ಡಾ.ಕೆ.ಎಲ್. ಯಶವಂತ್, ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ಎಂ.ಕೆ.ಮಂಜುನಾಥ್, ಬಿಜಿಎಸ್ ಪಬ್ಲಿಕ್ ಸ್ಕೂಲ್ ಮತ್ತು ಪಿಯು ಕಾಲೇಜು ಪ್ರಾಂಶುಪಾಲ ಸಿ.ಸಿ.ಕುಮಾರ್ ಮತ್ತಿತರರಿದ್ದರು.

# ಆಮೆಗತಿಯಲ್ಲಿ ಸಾಗಿದೆ ಅಮೃತ್ ಭಾರತ್ ಸ್ಟೇಷನ್

» ಮೊದಲನೇ ಪುಟದಿಂದ

ಸಂಚರಿಸುವ ನೂರಾರು ಪ್ರಯಾಣಿಕರು ರೈಲು ನಿಲ್ದಾಣಕ್ಕೆ ಬರುತ್ತಾರೆ. ನಿಲ್ದಾಣದಲ್ಲಿ ಮೂಲಸೌಕರ್ಯಗಳ ಕೊರತೆ ಕಾಡುತ್ತಿದೆ. ಶೌಚಾಲಯಗಳ ಕಟ್ಟಡ ಕಾಮಗಾರಿ ನಡೆಯುತ್ತಿರುವುದರಿಂದ ಮಹಿಳೆಯರು, ಮಕ್ಕಳು ತೊಂದರೆ ಅನುಭವಿಸುತ್ತಿದ್ದಾರೆ. ಇನ್ನು ರಾತ್ರಿ ಪ್ರಯಾಣಿಕರಿಗೆ ಸೂಕ್ತ ಭದ್ರತೆ ಇಲ್ಲ. ನಡೆದಾಡುವ ಮಾರ್ಗದಲ್ಲಿ ಸಿಮೆಂಟ್, ಮರಳು, ಟೈಲ್ಸ್, ಕಬ್ಬಿಣದ ಸರಳುಗಳು ಕಾಲಿಗೆ ತಾಗುತ್ತವೆ. ಅಲ್ಲಲ್ಲಿ ಬೆಳಕಿನ ವ್ಯವಸ್ಥೆಯೂ ಮಾಯವಾಗಿರುವುದರಿಂದ ಸಾರ್ವಜನಿಕರು ಮೊಬೈಲ್ ಟಾರ್ಚ್ ಆನ್ ಮಾಡಿಕೊಳ್ಳಲೇಬೇಕಿದೆ. ಇನ್ನು ರೈಲು ಬರುವ ಮಾಹಿತಿಯನ್ನು ಧ್ವನಿವರ್ಧಕ ಮೂಲಕ ಘೋಷಿಸಲಾಗುತ್ತದೆಯಾದರೂ ಡಿಸ್‌ಪ್ಲೇನಲ್ಲಿ ಮಾಹಿತಿ ಲಭ್ಯವಾಗುವುದಿಲ್ಲ. ತಾವು ಹತ್ತುವ ಬೋಗಿ ಎಲ್ಲಿ ನಿಲ್ಲುತ್ತದೆಂಬ ಅಂದಾಜು ಪ್ರಯಾಣಿಕರಿಗೆ ಇಲ್ಲದಂತಾಗಿದೆ. ಹೀಗಾಗಿ ರೈಲು ಬರುವವರೆಗೆ ಕಾದು ಆ ಬಳಿಕ ಓಡೋಡಿ ಹತ್ತಬೇಕಾದ ಸಂದಿಗ್ಧ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಪ್ರಯಾಣಿಕರು ಆರೋಪಿಸಿದ್ದಾರೆ.

**ಇಚ್ಛಾಸಕ್ತಿ ಕೊರತೆ**

ಕರ್ನಾಟಕ ಮಾತ್ರವಲ್ಲದೆ ದೇಶಾದ್ಯಂತ 1,337 ರೈಲು ನಿಲ್ದಾಣಗಳನ್ನು ಅಭಿವೃದ್ಧಿಗೆ ಆಯ್ಕೆ ಮಾಡಲಾಗಿದೆ. ಅದರಲ್ಲಿ ಕೆಲವು ನಿಲ್ದಾಣ ಕೆಲಸ ಪೂರ್ಣಗೊಂಡಿದೆ. ಆದರೆ ಹಾಸನ, ಸಕಲೇಶಪುರದ ಕಾಮಗಾರಿ ನಿರೀಕ್ಷಿತ ಪ್ರಮಾಣದಲ್ಲಿ ನಡೆಯುತ್ತಿಲ್ಲ. ಅದಕ್ಕೆ ಜನಪ್ರತಿನಿಧಿ ಹಾಗು ಅಧಿಕಾರಿಗಳ ಇಚ್ಛಾಸಕ್ತಿ ಕೊರತೆ ಕಾರಣ ಎನ್ನಲಾಗುತ್ತದೆ. ರೈಲ್ವೆ ಇಲಾಖೆ ನೌಕರರು ಈ ಬಗ್ಗೆ ಗಮನ ಹರಿಸುವುದಿಲ್ಲ. ಸಂಬಂಧಪಟ್ಟ ಗುತ್ತಿಗೆದಾರರು ಸಂಪೂರ್ಣ ಜವಾಬ್ದಾರಿ ವಹಿಸಿಕೊಂಡಿರುತ್ತಾರೆ. ಆದರೆ ಅವರನ್ನು ಬೆಂಬಿಡದೆ ಕೆಲಸ ಮಾಡಿಸಿಕೊಳ್ಳುವುದು ಜನಪ್ರತಿನಿಧಿಗಳ ಕೆಲಸ. ಆ ನಿಟ್ಟಿನಲ್ಲಿ ಯಾವ ಪ್ರಯತ್ನಗಳು ಆಗುತ್ತಿಲ್ಲ ಎಂದು ತಿಳಿದು ಬಂದಿದೆ.

# ಬಿಜೆಪಿ ನಾಯಕರಿಂದ ಸಿದ್ದರಾಮಯ್ಯ ಭೇಟಿ ಕೌತುಕ

• ಪ್ರಜೋದಯ ವರದಿ

**ಬೆಂಗಳೂರು:** ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಬಿಜೆಪಿ ನಾಯಕರು ಸಾಲು ಸಾಲಾಗಿ ಭೇಟಿ ಮಾಡುತ್ತಿದ್ದು ಭಾರೀ ಚರ್ಚೆಗೆ ಗ್ರಾಸವಾಗಿದೆ.

ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ, ಶಾಸಕ ರಮೇಶ್ ಜಾರಕಿಹೊಳಿ, ಮಾಜಿ ಶಾಸಕ ರಾಜೂಗೌಡ ಪ್ರತ್ಯೇಕವಾಗಿ ಭೇಟಿ ನೀಡಿ ಮಾತುಕತೆ ನಡೆಸಿದ್ದಾರೆ.

ಬುಧವಾರ ಸಿದ್ದರಾಮಯ್ಯ ಅವರನ್ನು ಸಿ.ಟಿ.ರವಿ ಭೇಟಿ ಮಾಡಿದ್ದರು. ಸಿ.ಟಿ.ರವಿ ಮತ್ತು ಸಿದ್ದರಾಮಯ್ಯ ಪರಸ್ಪರ ವಿರೋಧ ದಿಕ್ಕಿನಲ್ಲಿರುವವರು. ಸದಾ ವಾಗ್ದಾಳಿ ನಡೆಸಿಕೊಂಡೇ ಬಂದವರಾಗಿದ್ದಾರೆ. ಹೀಗಾಗಿ ಅವರ ಈ ಭೇಟಿ ಹಾಗು ಮಾತುಕತೆ ಸಾಕಷ್ಟು ಕುತೂಹಲಕ್ಕೆ ಕಾರಣವಾಗಿದೆ.

ಗುರುವಾರ ಬಿಜೆಪಿ ಶಾಸಕ ರಮೇಶ್ ಜಾರಕಿಹೊಳಿ ಅವರು ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ. ಸುಮಾರು ಒಂದು ಗಂಟೆಗೂ ಹೆಚ್ಚು ಹೊತ್ತು ಸಿದ್ದರಾಮಯ್ಯ ಜೊತೆಗೆ ರಮೇಶ್ ಚರ್ಚೆ ನಡೆಸಿದ್ದಾರೆ. ಪ್ರಸಕ್ತ ರಾಜಕೀಯ ವಿದ್ಯಮಾನಗಳ ಬಗ್ಗೆ ಉಭಯ ನಾಯಕರು ಚರ್ಚಿಸಿರುವ ಸಾಧ್ಯತೆ ಇದೆ. ರಮೇಶ್ ಈ ಹಿಂದೆ ಕಾಂಗ್ರೆಸ್‌ನಲ್ಲೇ ಇದ್ದರು. ಸಿದ್ದರಾಮಯ್ಯ ಅವರ ಆಪ್ತ ವಲಯದಲ್ಲಿ ಅವರು ಗುರುತಿಸಿಕೊಂಡಿದ್ದರು. ಬದಲಾದ ರಾಜಕೀಯ ಸನ್ನಿವೇಶದಲ್ಲಿ ಅವರು ಬಿಜೆಪಿಗೆ ಸೇರ್ಪಡೆಗೊಂಡಿದ್ದಾರೆ. ಸದ್ಯ ಬಿಜೆಪಿಯಲ್ಲಿದ್ದರೂ ಪಕ್ಷದಲ್ಲಿ ಸಕ್ರಿಯ ವಾಗಿ ಕಾಣಿಸಿಕೊಳ್ಳುತ್ತಿಲ್ಲ. ಕೆಲವು ವಿಚಾರದಲ್ಲಿ ಅಂತರ ಕಾಯ್ದುಕೊಂಡಿದ್ದಾರೆ. ಹೀಗಾಗಿ ಅವರು ಸಿದ್ದರಾಮಯ್ಯ ಅವರನ್ನು ಕಾವೇರಿಯಲ್ಲಿ ಭೇಟಿ ಮಾಡಿ ಮಾತುಕತೆ ನಡೆಸಿದ್ದು ಸಹಜ ವಾಗಿ ರಾಜಕೀಯ ವಲಯದಲ್ಲಿ ಕುತೂಹಲ ಕೆರಳಿಸಿದೆ.

ರಮೇಶ್ ಜಾರಕಿಹೊಳಿ ಜೊತೆ ಸಿದ್ದರಾಮಯ್ಯರನ್ನು ಭೇಟಿ ಬಿಜೆಪಿಯ ಮತ್ತೊಬ್ಬ ನಾಯಕ ರಾಜುಗೌಡ ಭೇಟಿಯಾಗಿದ್ದಾರೆ. ಇದೊಂದು ವೈಯಕ್ತಿಕ ನೆಲೆಯ ಭೇಟಿ ಎಂದು ಹೇಳ ಲಾಗುತ್ತಿದೆ. ಒಟ್ಟಿನಲ್ಲಿ ಬಿಜೆಪಿಯ ಶಾಸಕರು, ನಾಯಕರು ಸಿದ್ದರಾಮಯ್ಯ ಅವರನ್ನು ಸರಣಿ ಯಾಗಿ ಭೇಟಿ ಮಾಡಿ ಮಾತುಕತೆ ನಡೆಸುತ್ತಿರುವುದು ನಾನಾ ಆಯಾಮದಲ್ಲಿ ಚರ್ಚೆಗೆ ಗ್ರಾಸವಾಗಿದೆ.

# ಭಾರತದ ಜನಸಂಖ್ಯೆ ಏರುತ್ತಿರುವುದು ಅಪಾಯಕಾರಿ ಬೆಳವಣಿಗೆ

» ಮೊದಲನೇ ಪುಟದಿಂದ

ಮಾನಸಿಕವಾಗಿಯೂ ಪುರುಷರಿ ಗಿಂತ ಮಹಿಳೆಯರೇ ಸಧೃಡರು. ಯುವತಿಯರು ಇನ್ನೊಬ್ಬರ ಮೇಲೆ ಅವಲಂಬನೆಯಾಗಬಾರದು. ಗಂಡನ ದುಡಿಮೆಯಲ್ಲಿ ಬದುಕು ನಡೆಸಿದರಾಯಿತು ಎಂಬ ಮನಸ್ಥಿತಿಯಿಂದ ಹೊರಬರಬೇಕು. ಉತ್ತಮ ವ್ಯಾಸಂ ಗದ ಮೂಲಕ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಬೇಕೆಂದು ವಿದ್ಯಾರ್ಥಿಗಳನ್ನು ಹುರಿದುಂಬಿಸಿದರು.

ಅರ್ಥಶಾಸ್ತ್ರ ವಿಭಾಗ ಮುಖ್ಯಸ್ಥೆ ರತ್ನ ಅವರು ಮಾತನಾಡಿ, ವಿಶ್ವದ ಒಟ್ಟು ಜನಸಂಖ್ಯೆಯಲ್ಲಿ ಭಾರತದ ಪಾಲು ಶೇ. 17ರಷ್ಟಿದೆ. ಸ್ವಾತಂತ್ರ್ಯ ಸಂದರ್ಭದಲ್ಲಿ ದೇಶದಲ್ಲಿ 37 ಕೋಟಿ ಜನರಿದ್ದರು. ಈಗ 147 ಕೋಟಿ ದಾಟುವ ಮೂಲಕ ಚೀನಾವನ್ನು ಹಿಂದಿಕ್ಕಿದ್ದೇವೆ. ವೇಗವಾಗಿ ಬೆಳೆಯುತ್ತಿ ರುವ ಜನಸಂಖ್ಯೆ ಹಲವು ಸವಾಲು ಸೃಷ್ಟಿಸುತ್ತಿದೆ. ಶಿಕ್ಷಣ, ಆರೋಗ್ಯ, ವಾಯು ಮಾಲಿನ್ಯ, ವಸತಿಗೆ ಸಮಸ್ಯೆ ಆಗುತ್ತಿದೆ. ಜನಸಂಖ್ಯೆ ಏರಿಕೆಯೂ ಕೃಷಿ ಮೇಲೆ ನೇರ ಪರಿಣಾಮ ಬೀರುತ್ತದೆಂದು ವಿವರಿಸಿದರು.

ರೆಡ್ ಕ್ರಾಸ್ ಜಿಲ್ಲಾ ಸಭಾಪತಿ ಹೆಚ್.ಪಿ.ಮೋಹನ್, ಸ್ತ್ರೀ ರೋಗ ತಜ್ಞೆ ಡಾ|| ರಂಗಲಕ್ಷ್ಮಿ ಮಾತನಾಡಿದರು. ರೆಡ್ ಕ್ರಾಸ್ ಉಪಸಭಾಪತಿ ಡಾ.ವೈ.ಎಸ್.ವೀರಭದ್ರಪ್ಪ, ಕಾರ್ಯದರ್ಶಿಗಳಾದ ಶಬ್ಬೀರ್ ಅಹಮದ್, ಎಸ್.ಎಸ್. ಪಾಷ, ಕೆ.ಟಿ.ಜಯಶ್ರೀ, ಖಜಾಂಚಿ ಹೆಚ್.ಡಿ.ಜಯೇಂದ್ರ ಕುಮಾರ್, ಹೆಚ್.ಕೆ.ವೆಂಕಟೇಶ್, ಪ್ರಾಂಶುಪಾಲ ಬಾಲಕೃಷ್ಣ ಮತ್ತಿತರರಿದ್ದರು.

# ನೇಣುಬಿಗಿದುಕೊಂಡು ಆಟೋಚಾಲಕ ಆತ್ಮಹತ್ಯೆ

• ಪ್ರಜೋದಯ ವರದಿ



**ಹಾಸನ:** ಬ್ಯಾಂಕ್ ಸಾಲ ಸೇರಿ ಸಾಕಷ್ಟು ಕೈ ಸಾಲ ಮಾಡಿಕೊಂಡಿದ್ದ ಆಟೋ ಚಾಲಕ ಸಾಲ ತೀರಿಸಲಾಗದೆ ಮನನೊಂದು ಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಗರದ ದೇವಮ್ಮ ಬಡಾವಣೆಯಲ್ಲಿ ನಡೆದಿದೆ. ಶಿವರಾಜ್ (40) ಮೃತ ಆಟೋ ಚಾಲಕ.

ಶಿವರಾಜ್, ಬ್ಯಾಂಕ್ ಸಾಲದ ಜೊತೆಗೆ ಹಲವು ಕಡೆಗಳಲ್ಲಿ ಕೈ ಸಾಲ ಮಾಡಿಕೊಂಡಿದ್ದರುಎನ್ನಲಾಗಿದೆ. ಸಾಲ ತೀರಿಸಲಾಗದೆ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದ ಅವರು, ಸಾಲದ ವಿಚಾರವಾಗಿ ಕುಟುಂಬ ದಲ್ಲಿ ಪ್ರತಿನಿತ್ಯ ನಡೆಯುತ್ತಿದ್ದ ಜಗಳದಿಂದಲೂ ಮನನೊಂದಿದ್ದರು. ಇದೇ ಕಾರಣಕ್ಕೆ ಮನ ನೊಂದು ಆತ್ಮಹತ್ಯೆಗೆ ಶರಣಾಗಿರುವ ಶಂಕೆ ವ್ಯಕ್ತವಾಗಿದೆ. ಘಟನೆ ತಿಳಿದು ಸ್ಥಳಕ್ಕೆ ಪೊಲೀಸರು ಹಾಗು ವಿಧಿವಿಜ್ಞಾನ ಪ್ರಯೋಗಾಲಯದ ತಂಡ ಭೇಟಿ ನೀಡಿ ಪರಿಶೀಲನೆ ನಡೆ ಸಿತು. ಈ ಸಂಬಂಧ ಬಡಾವಣೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಅಪಘಾತ: ಯುವಕ ಸಾವು

• ಪ್ರಜೋದಯ ವರದಿ

**ಅರಸೀಕೆರೆ:** ಕ್ಯಾಂಟರ್ ಡಿಕ್ಕಿಯಾಗಿ ಬೈಕ್ ಸವಾರ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಬಾಣಾವರ-ಅರಸೀಕೆರೆ ಮಾರ್ಗದ ಬೆಂಡೆಕೆರೆ ಶೆಟ್ಟಿಕಟ್ಟೆಯಮ್ಮ ದೇವಸ್ಥಾನದ ಬಳಿ ನಡೆದಿದೆ.

ಬಾಣಾವರ ಹೋಬಳಿ ಚಿಕ್ಕಮ್ಮನಹಳ್ಳಿಯ ಸಿ.ಪಿ.ಸುಮಂತ್ (22) ಮೃತ ದುರ್ದೈವಿ. ಫೈನಾನ್ಸ್‌ನಲ್ಲಿ ಕೆಲಸ ಮಾಡಿಕೊಂಡಿದ್ದ ಯುವಕ ಬುಧವಾರ ಕೆಲಸ ಮುಗಿಸಿ ಮನೆಗೆ ಬರುತ್ತಿದ್ದಾಗ ಅರಸೀಕೆರೆ ಕಡೆಯಿಂದ ವೇಗವಾಗಿ ಬಂದ ಕ್ಯಾಂಟರ್ ಡಿಕ್ಕಿಯಾಗಿ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಬಾಣಾವರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ವಿದ್ಯಾರ್ಥಿಗಳಿಗೆ ಕರಿಯರ್ ಗೈಡೆನ್ಸ್ ಪುಸ್ತಕ ವಿತರಣೆ




• ಪ್ರಜೋದಯ ವರದಿ

**ಅರೇಹಳ್ಳಿ:** ಬೇಲೂರು ತಾಲ್ಲೂಕು ಅರೇಹಳ್ಳಿ ಹೋಬಳಿ ನಾರ್ವೆಯ ಜೆಎಸ್‌ಎಸ್ ಪ್ರೌಢಶಾಲೆಯ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಎಸ್‌ಎಸ್‌ಎಲ್‌ಸಿ ಬಳಿಕ ಮುಂದೇನು ಎಂಬುದರ ಕುರಿತು ಮಾಹಿತಿ ನೀಡುವ ಉದ್ದೇಶದಿಂದ ಅರೇಹಳ್ಳಿ ರೋಟರಿ ಸಂಸ್ಥೆಯ ವತಿಯಿಂದ ಕರಿಯರ್ ಗೈಡೆನ್ಸ್ ಪುಸ್ತಕ ವಿತರಿಸಲಾಯಿತು.

ಎಸ್‌ಎಸ್‌ಎಲ್‌ಸಿ ನಂತರ ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಳ್ಳಬಹುದಾದ ಶಿಕ್ಷಣ ಹಾಗು ವೃತ್ತಿ ಅವಕಾಶಗಳ ಕುರಿತು ಮಾರ್ಗದರ್ಶನ ನೀಡುವ ಉದ್ದೇಶದಿಂದ ಈ ಪುಸ್ತಕಗಳನ್ನು ವಿತರಿಸಲಾಯಿತು.

ಸಂಸ್ಥೆಯ ಅಧ್ಯಕ್ಷ ಮಹಂತ್ ನಾರ್ವೆ, ಕಾರ್ಯದರ್ಶಿ ಎಂ.ಎಸ್. ವಿಜಯ್, ರಕ್ಷಿತಾ ಮಹಂತ್, ಪವಿತ್ರ ವಿಜಯ್ ಹಾಗು ಶಾಲೆಯ ಶಿಕ್ಷಕರು ಉಪಸ್ಥಿತರಿದ್ದರು.

# 101 ತಾಲ್ಲೂಕು ಬರಪೀಡಿತ ಪಟ್ಟಿಗೆ

» ಮೊದಲನೇ ಪುಟದಿಂದ

ಚ್ಚರಿಕಾ ಕ್ರಮಗಳಿಗಾಗಿ ಸರ್ಕಾರ ವಿವಿಧ ಹಂತಗಳಲ್ಲಿ ಒಟ್ಟು 635 ಕೋಟಿ ಅನುದಾನ ಒದಗಿಸಿದೆ. ಕುಡಿಯುವ ನೀರಿನ ಪೂರೈಕೆಗಾಗಿ ಜಿಲ್ಲಾಧಿಕಾರಿಗಳಿಗೆ 117 ಕೋ.ರೂ., ಗ್ರಾಮೀಣ ವಿಧಾನಸಭಾ ಕ್ಷೇತ್ರಗಳಿಗೆ 189 ಕೋ.ರೂ., ಜಿಲಾಧಿಕಾರಿಗಳ ಪಿಡಿ ಖಾತೆಯಲ್ಲಿ 329 ಕೋ.ರೂ. ಲಭ್ಯವಿದೆ. ಜಾನುವಾರುಗಳಿಗೆ ಮೇವಿನ ಕೊರತೆಯಾಗದಂತೆ ಮೇವು ಕಿಟ್‌ಗಳನ್ನು ವಿತರಿಸಲಾಗುತ್ತಿದೆ.

**1,239 ಕೋ.ರೂ. ನೆರವಿಗೆ ಮನವಿ:** 15ನೇ ಹಣಕಾಸು ಆಯೋಗದ ಶಿಫಾರಸಿನ ಅನ್ವಯ ರಾಜ್ಯಕ್ಕೆ ಬರ ಪರಿಹಾರವಾಗಿ ಕೇಂದ್ರ ಸರ್ಕಾರದಿಂದ ಒಟ್ಟು 1,239 ಕೋ.ರೂ. ಅನುದಾನ ಬಿಡುಗಡೆಯಾಗಬೇಕಿದೆ. ಅದರಲ್ಲಿ ಮೊದಲ ಕಂತು 450 ಕೋ.ರೂ. ತಕ್ಷಣವೇ ಬಿಡುಗಡೆ ಮಾಡುವಂತೆ ಕೇಂದ್ರಕ್ಕೆ ಸಮಗ್ರ ವರದಿ ಹಾಗು ಮನವಿ ಪತ್ರ ಸಲ್ಲಿಸಲಾಗುತ್ತಿದೆ.

## ಅಮೇರಿಕಾ: ವೀಸಾ ಸಂದರ್ಶನ ತಾತ್ಕಾಲಿಕ ಸ್ಥಗಿತ

• ಪ್ರಜೋದಯ ವರದಿ

**ವಾಷಿಂಗ್ಟನ್:** ಅಮೇರಿಕಾದ ಟ್ರಂಪ್ ಆಡಳಿತವು ಜಾಗತಿಕವಾಗಿ ಈಗಾಗಲೇ ಸಲ್ಲಿಕೆಯಾಗಿ ರುವ ವಲಸಿಗರ ವೀಸಾ ಅರ್ಜಿಗಳನ್ನು ತಾತ್ಕಾಲಿಕ ವಾಗಿ ಸ್ಥಗಿತಗೊಳಿಸಿದೆ. ಅಕ್ರಮ ವಲಸೆ ತಡೆ ಮತ್ತು ಗ್ರೀನ್ ಕಾರ್ಡ್ ವಿತರಣೆಯಲ್ಲಿ ಅಧ್ಯಕ್ಷ ಟ್ರಂಪ್ ಅವರು ತರುತ್ತಿರುವ ಕಠಿಣ ನೀತಿಗಳ ಭಾಗ ಇದಾಗಿದೆ.

ಅರ್ಹ ಅಮೇರಿಕನ್ನರಿಗೆ ಮೀಸಲಾಗಿರುವ ಸರ್ಕಾರಿ ಸೌಲಭ್ಯಗಳ ಮೇಲೆ ಅವಲಂಬಿತ ರಾಗುವವರ (ಪಬ್ಲಿಕ್ ಚಾರ್ಜ್) ಪ್ರವೇಶವನ್ನು ಮಿತಿಗೊಳಿಸುವ ಮತ್ತು ನಿರ್ಬಂಧಗಳನ್ನು ಬಿಗಿ ಮಾಡುವ ಕ್ರಮ ಇದು ಎಂದು ಫೈನಾನ್ಶಿಯಲ್ ಟೈಮ್ಸ್ ವರದಿ ತಿಳಿಸಿದೆ.

ಪಬ್ಲಿಕ್ ಚಾರ್ಜ್ ಅಡಿ ಸಲ್ಲಿಕೆಯಾದ ಅರ್ಜಿಗಳ ಸಮಗ್ರ ಮತ್ತು ಸ್ಥಿರ ಪರಿಶೀಲನೆಗಾಗಿ ಅಮೇರಿಕಾ ಕಾನ್ಸುಲರ್ ಕಚೇರಿ ಅಧಿಕಾರಿಗಳಿಗೆ ತರಬೇತಿ ನೀಡುತ್ತಿದೆ. ಕಾನ್ಸುಲರ್ ಅಧಿ ಕಾರಿಯು ಅರ್ಜಿದಾರನ ಆರ್ಥಿಕ ಸ್ಥಿತಿ, ವಯಸ್ಸು, ಆರೋಗ್ಯ, ಕೌಶಲ ಮತ್ತು ಕುಟುಂಬದ ಸ್ಥಿತಿಗತಿ ಬಗ್ಗೆ ಪರಿಶೀಲನೆ ನಡೆಸಲಿದ್ದಾರೆ.

# ಸೆ.5 ರಿಂದ ಬಾಯಿ ಬಡಿದುಕೊಳ್ಳುವ ಚಳವಳಿ

## ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಪೊಲೀಸ್ ಇಲಾಖೆ ವಿಫಲ: ಅಗಿಲೆ ಯೋಗೀಶ್

• ಪ್ರಜೋದಯ ವರದಿ




**ಹಾಸನ:** ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಪೊಲೀಸ್ ಇಲಾಖೆ ವಿಫಲವಾಗಿ ರುವುದನ್ನು ಖಂಡಿಸಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿ ಎದುರು ಸೆ.5 ರಿಂದ ಬಾಯಿ ಬಡಿದುಕೊಳ್ಳುವ ಲಬೋ ಲಬೋ ಚಳವಳಿ ನಡೆಸಲಾಗುವುದೆಂದು ಎಎಪಿ ರಾಜ್ಯ ಉಪಾಧ್ಯಕ್ಷ ಅಗಿಲೆ ಯೋಗೀಶ್ ಅವರು ತಿಳಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಹಾಗೂ ಅಪರಾಧ ಪ್ರಕರಣ ನಿಯಂತ್ರಿಸುವಲ್ಲಿ ಪೊಲೀಸ್ ವರಿಷ್ಠಾಧಿಕಾರಿ ವಿಫಲರಾಗಿದ್ದಾರೆ. ಸೋಮವಾರದೊಳಗೆ ಸೂಕ್ತ ಕ್ರಮ ಕೈಗೊಳ್ಳದಿದ್ದರೆ ಮಂಗಳವಾರದಿಂದ ಚಳುವಳಿ ಪ್ರಾರಂಭ ಮಾಡಲಾಗುವುದು. ಇತ್ತೀಚಿನ ದಿನಗಳಲ್ಲಿ ಸುದ್ದಿಮಾಧ್ಯಮಗಳಲ್ಲಿ ಪ್ರತಿನಿತ್ಯ ಅಪರಾಧ ಪ್ರಕರಣ ವರದಿಯಾಗುತ್ತಿವೆ. ಕೊಲೆ, ಸುಲಿಗೆ ಹಾಗು ದರೋಡೆ ಪ್ರಕರಣ ಹೆಚ್ಚುತ್ತಿರುವುದರಿಂದ ಸಾರ್ವಜನಿಕರು ಆತಂಕದಲ್ಲಿ ಬದುಕುವಂತಾಗಿದೆ ಎಂದು ದೂರಿದರು.

ಜಿಲ್ಲೆಯಲ್ಲಿ ಅಪರಾಧ ಪ್ರಕರಣ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿವೆ, ಅವುಗಳಿಗೆ ಕಡಿವಾಣ ಸಾಧ್ಯವಾಗಿಲ್ಲ. ಜಿಲ್ಲೆಯಲ್ಲಿ ಗಾಂಜಾ ಹಾಗು ಮಾದಕ ವಸ್ತುಗಳ ಸೇವನೆ ಮತ್ತು ಮಾರಾಟ, ವ್ಹೀಲಿಂಗ್ ಹಾವಳಿ ಹೆಚ್ಚಾಗಿದೆ. ರಸ್ತೆಗಳಲ್ಲೇ ಮಚ್ಚು-ಲಾಂಗ್ ಮಾರಕಾಸ್ತ್ರಗಳನ್ನು ಹಿಡಿದು ಪುಂಡರು ಅಟ್ಟಹಾಸ ಪ್ರದರ್ಶನ ಮಾಡುತ್ತಿದ್ದಾರೆ. ಆದರೂ ಪೊಲೀಸ್ ಇಲಾಖೆ ಕಣ್ಣು ಮುಚ್ಚಿ ಕುಳಿತಿದೆಯೇ ಎಂಬ ಅನುಮಾನ ಸಾರ್ವಜನಿಕರಲ್ಲಿ ಮೂಡುತ್ತಿದೆ ಎಂದರು.

ನಗರದಲ್ಲಿ ಮದ್ಯದ ಅಂಗಡಿಗಳ ಸಂಖ್ಯೆ ಹೆಚ್ಚಾಗಿದ್ದು, ರಾತ್ರಿ ವೇಳೆಯಲ್ಲಿ ಮಹಿಳೆಯರು ಮತ್ತು ಮಕ್ಕಳು ಓಡಾಡುವುದೇ ಕಷ್ಟಕರವಾಗಿದೆ. ಜಿಲ್ಲೆಯಲ್ಲಿ ಜನರ ಸುರಕ್ಷತೆಗಾಗಿ ಪೊಲೀಸ್ ಇಲಾಖೆ ಪ್ರಾಮಾಣಿಕವಾಗಿ ಕಾರ್ಯನಿರ್ವಹಿ ಸುತ್ತಿದೆಯೇ ಎಂಬ ಪ್ರಶ್ನೆ ಮೂಡಿದೆ. ರಾತ್ರಿ ಗಸ್ತು ತಿರುಗುವ ಪೊಲೀಸರ ಸಂಖ್ಯೆ ಹೆಚಿಸಿ ಸಾರ್ವಜನಿಕರಿಗೆ ಸೂಕ್ತ ರಕ್ಷಣೆ ನೀಡ ಬೇಕೆಂದು ಒತ್ತಾಯಿಸಿದರು.

ವ್ಹೀಲಿಂಗ್ ಮಾಡುವ ಪುಂಡರಿಗೆ ತಕ್ಷಣವೇ ಕಡಿವಾಣ ಹಾಕಬೇಕು. ಇಲ್ಲವಾದರೆ ಇನ್ನಷ್ಟು ಜೀವಹಾನಿಯಾಗುವ ಸಾಧ್ಯತೆ ಇದೆ. ಪುಡಿ ರೌಡಿಗಳ ಅಟ್ಟಹಾಸ ನಿಯಂತ್ರಿಸದಿದ್ದರೆ ಸಾರ್ವಜನಿ ಕರು ನೆಮ್ಮದಿಯಿಂದ ಬದುಕಲು ಸಾಧ್ಯವಿಲ್ಲ. ಕೂಡಲೇ ಐಜಿ ಅವರು ಜಿಲ್ಲೆಗೆ ಆಗಮಿಸಿ ಪೊಲೀಸ್ ಇಲಾಖೆಯ ಕಾರ್ಯವೈಖರಿ ಬಗ್ಗೆ ಪರಿಶೀಲನೆ ನಡೆಸಬೇಕು. ಸ್ಥಳಕ್ಕೆ ಮೇಲಾಧಿ ಕಾರಿಗಳು ಆಗಮಿಸಿ ಸೂಕ್ತ ಕ್ರಮ ಕೈಗೊಳ್ಳುವವರೆಗೂ ಹೋರಾಟ ಮುಂದುವರಿಸಲಾಗುವುದು ಎಂದು ಎಚ್ಚರಿಸಿದರು.

ಎಎಪಿ ಮುಖಂಡರಾದ ಮಧು, ಶಂಕರ್, ಖಾದರ್, ಮಂಜುನಾಥ್, ವಿಕಾಸ್ ಇದ್ದರು.

# ಪ್ರವಾದಿ ಮಹಮ್ಮದ್ ಕುರಿತ ಎರಡು ಪುಸ್ತಕ ಲೋಕಾರ್ಪಣೆ

• ಪ್ರಜೋದಯ ವರದಿ



**ಅರೇಹಳ್ಳಿ:** ಬೇಲೂರು ತಾಲ್ಲೂಕು ಅರೇಹಳ್ಳಿಯ ಹಿರಾ ಕೇಂದ್ರದಲ್ಲಿ ಮಾನವ ಮನಸ್ಸಿನ ಕೃಷಿಕ ಮಹದೋದ್ದೇಶದ ಪ್ರವಾದಿ ಮಹಮ್ಮದ್ ಹಾಗು ಸಮಗ್ರ ಕ್ರಾಂತಿಯ ಜ್ಯೋತಿ ಬೆಳಗಿದ ಪೈಗಂಬರ್ ಮಹಮ್ಮದ್ ಎಂಬ ಎರಡು ಕೃತಿಗಳನ್ನು ಬಿಡುಗಡೆ ಮಾಡಲಾಯಿತು.

ಜಮಾಅತೆ ಇಸ್ಲಾಮಿ ಹಿಂದ್ ಅರೇಹಳ್ಳಿ ಘಟಕದ ಕಾರ್ಯದರ್ಶಿ ಮುಜೀಬುರ್ ರೆಹಮಾನ್ ಅವರು ಮಾತನಾಡಿ, ಪ್ರವಾದಿ ಮಹಮ್ಮದ್ ಅವರ ಜನ್ಮ ದಿನದ ಪ್ರಯುಕ್ತ ಆ.26 ರಿಂದ ಸೆ. 6ರ ವರೆಗೆ ರಾಜ್ಯಾದ್ಯಂತ ಸೀರತ್ ಅಭಿಯಾನ ನಡೆಯಲಿದೆ ಎಂದರು.

ಪ್ರವಾದಿ ಪೈಗಂಬರ್ ಅವರು ಜಗತ್ತಿಗೆ ತಂದ ಸಮಗ್ರ ಕ್ರಾಂತಿಯು ಸತ್ಯ, ನ್ಯಾಯ, ಕರುಣೆ, ಮಾನವ ಸಮಾನತೆ, ಮಾನವ ಘನತೆ ಹಾಗು ಮಾನವ ಕುಲದ ಏಕತೆಯ ತತ್ವಗಳ ಮೇಲೆ ಸ್ಥಾಪಿತವಾಗಿದೆ. ಜನರ ಮನಸ್ಸನ್ನು ಸಂಸ್ಕರಿಸುವ ಮೂಲಕ ಅವರ ನೈತಿಕತೆ ಹಾಗು ಚಾರಿತ್ರ್ಯವನ್ನು ಶುದ್ಧೀಕರಿಸಿ ವ್ಯಕ್ತಿ ಮತ್ತು ಸಮಾಜದ ಪರಿವರ್ತನೆಗೆ ಕಾರಣರಾದರು. ಅವರದ್ದು ಅಪ್ಪಟ ಮಾನವೀಯ ಕ್ರಾಂತಿಯಾಗಿತ್ತು. ಮಾನವ ಜೀವನದ ಆಧ್ಯಾತ್ಮಿಕ, ಸಾಮಾಜಿಕ, ಕೌಟುಂಬಿಕ, ಆರ್ಥಿಕ, ಶೈಕ್ಷಣಿಕ ಹಾಗು ಆಡಳಿತ ಸೇರಿ ಎಲ್ಲಾ ಕ್ಷೇತ್ರಗಳಲ್ಲೂ ಸುಭಿಕ್ಷೆ ಮತ್ತು ನಿರ್ಭಯತೆಯ ಸಮಾಜ ನಿರ್ಮಾಣ ಅವರ ಗುರಿಯಾಗಿತ್ತು ಎಂದರು.

ಪ್ರವಾದಿ ಮಹಮ್ಮದ್ ಅವರ ಸಂದೇಶಗಳನ್ನು ಕನ್ನಡ ಜನತೆಗೆ ಪರಿಚಯಿಸುವ ಉದ್ದೇಶ ದಿಂದ ಕ್ರಾಂತಿಯ ಜ್ಯೋತಿ ಪ್ರವಾದಿ ಮಹಮ್ಮದ್ ಶೀರ್ಷಿಕೆಯಡಿ ವಿಚಾರಗೋಷ್ಠಿ, ಸಾರ್ವಜನಿಕ ಸಮಾವೇಶ, ಸಂವಾದ, ಚರ್ಚಾ ಗೋಷ್ಠಿ, ಸೀರತ್ ಪ್ರವಚನ, ಸೀರತ್ ಎಕ್ಸಿಬಿಷನ್, ಸಮಾಜ ಸೇವಾ ಚಟುವಟಿಕೆ ಹಾಗು ಸಾಹಿತ್ಯ ಸಮ್ಮೇಳನ ಆಯೋಜಿಸಲಾಗುತ್ತಿದೆ ಎಂದರು.

ಅರೇಹಳ್ಳಿಯ ಹಿರಾ ಸೆಂಟರ್‌ನಲ್ಲಿ ಸೆ.1ರಂದು ಸೀರತ್ ಪ್ರವಚನ ನಡೆಯಲಿದ್ದು, ಎಲ್ಲಾ ಸಮುದಾಯದವರು ಭಾಗವಹಿಸಬೇಕೆಂದು ಮನವಿ ಮಾಡಿದರು. ಜಮಾಅತೆಯ ಹೋಬಳಿ ಘಟಕದ ಅಧ್ಯಕ್ಷ ಇಜಾರ್ ಅಸರ್ ಉಮ್ರಿ ಹಾಗು ಪದಾಧಿಕಾರಿಗಳು ಉಪಸ್ಥಿತರಿದ್ದರು.

# ನೇಪಾಳ ನೈಸರ್ಗಿಕ ವಿಕೋಪ: ಭೂಕಂಪವಲ್ಲ, ಹಿಮಬಂಡೆ ಕುಸಿತವೇ ಪ್ರವಾಹಕ್ಕೆ ಕಾರಣ

• ಪ್ರಜೋದಯ ವರದಿ



**ವಾಷಿಂಗ್ಟನ್:** ನೇಪಾಳದಲ್ಲಿ ಸಂಭವಿಸಿದ ದಿಢೀರ್ ಪ್ರವಾಹಕ್ಕೆ ಭೂಕಂಪ ಕಾರಣವಲ್ಲ, ದೊಡ್ಡ ಪ್ರಮಾಣದಲ್ಲಿ ಹಿಮಬಂಡೆಗಳು ಕುಸಿದು ಪ್ರವಾಹ ಉಂಟಾಗಿದೆ ಎಂದು ಅಮೇರಿಕಾದ ಭೂವೈಜ್ಞಾನಿಕ ಸಮೀಕ್ಷಾ ಸಂಸ್ಥೆ (ಯುಎಸ್‌ಜಿಎಸ್) ಹೇಳಿದೆ.

ಸ್ಥಳೀಯ ಭೂಕಂಪ ಮಾಪನ ಕೇಂದ್ರಗಳಲ್ಲಿ ದಾಖಲಾದ ತರಂಗಗಳು, ಉಪಗ್ರಹ ಚಿತ್ರ ಗಳನ್ನು ವಿಶ್ಲೇಷಣೆಗೆ ಒಳಪಡಿಸಿರುವ ಯುಎಸ್‌ಜಿಎಸ್, ನೇಪಾಳ-ಟಿಬೆಟ್ ಗಡಿಯಲ್ಲಿ ಭಾರಿ ಗಾತ್ರದ ಹಿಮಬಂಡೆಗಳು ಕುಸಿದು ಕಣಿವೆಗೆ ಅಪ್ಪಳಿಸಿದಾಗ ಭೂಕಂಪದಷ್ಟೇ ತೀವ್ರತೆಯ ಕಂಪನ ದಾಖಲಾಗಿದೆ ಎಂದು ಹೇಳಿದೆ.

ಅಸಲಿಗೆ ಭೂಕಂಪದಿಂದ ಹಿಮಬಂಡೆಗಳು ಉರುಳಿಲ್ಲ, ಬದಲಿಗೆ ಹಿಮಬಂಡೆಗಳು ಕುಸಿದಾಗ 5.2ರಷ್ಟು ತೀವ್ರತೆಯ ಕಂಪನ ದಾಖಲಾಗಿದೆ. ಕಣಿವೆಯ ಮೂಲಕ ಹಿಮರಾಶಿ, ಕಲ್ಲು, ಮಣ್ಣು ಮತ್ತು ಅವಶೇಷಗಳು ವೇಗವಾಗಿ ಹರಿದು ಭೋಟೆ ಕೋಶಿ ನದಿಯ ಉಪನದಿ ಲೆಂಡೆಯಲ್ಲಿ ದಿಢೀರ್ ಪ್ರವಾಹ ಉಂಟಾಯಿತು ಎಂದು ಸಂಸ್ಥೆ ವಿಶ್ಲೇಷಿಸಿದೆ.

ಟಿಬೆಟ್ ಗಡಿಯಲ್ಲಿ ಸಂಭವಿಸಿದ 4.4 ತೀವ್ರತೆಯ ಭೂಕಂಪದಿಂದ ಹಿಮಬಂಡೆಗಳು ಕುಸಿದು ಪ್ರವಾಹ ಉಂಟಾಯಿತು ಎಂದು ನೇಪಾಳದ ವಿಪತ್ತು ನಿರ್ವಹಣೆ ಪ್ರಾಧಿಕಾರ ಬುಧವಾರ ಹೇಳಿತ್ತು.

**5,200 ಮೀಟರ್ ಎತ್ತರದಿಂದ ಉರುಳಿದ ಹಿಮದ ಬಂಡೆ**

ಉಪಗ್ರಹ ಚಿತ್ರಗಳನ್ನು ವಿಶ್ಲೇಷಣೆಗೆ ಒಳಪಡಿಸಿರುವ ಕೆನಡಾದ ಕ್ಯಾಲ್ಗರಿ ವಿಶ್ವವಿದ್ಯಾಲಯದ ಭೂ ಸ್ವರೂಪ ಅಧ್ಯಯನ ವಿಭಾಗದ ಸಹ ಪ್ರಾಧ್ಯಾಪಕರಾದ ಡೇನಿಯಲ್ ಶ್ಯೂಗರ್ ಅವರು, 5,200 ಮೀಟರ್ ಎತ್ತರದಿಂದ ಭಾರಿ ಹಿಮಬಂಡೆಯು ಕಣಿವೆಗೆ ಉರುಳಿದ್ದರಿಂದ ದಿಢೀರ್ ಪ್ರವಾಹ ಉಂಟಾಗಿದೆ ಎಂದು ಹೇಳಿದ್ದಾರೆ.

ತಾಪಮಾನ ಏರಿಕೆ, ಬಲವಾದ ಗಾಳಿ, ಮಳೆ ಸೇರಿ ಹವಾಮಾನದಲ್ಲಿನ ಸಣ್ಣ ಬದಲಾವಣೆ ಸಹ ತ್ವರಿತಗತಿಯಲ್ಲಿ ಹಿಮ ಕರಗುವಿಕೆಗೆ ಕಾರಣವಾಗುತ್ತದೆ. ಮೇಲ್ಮೈ ಕರಗುತ್ತಿದ್ದಂತೆ ಸಡಿಲಗೊಳ್ಳುವ ಹಿಮದ ಬಂಡೆಗಳು ಕಣಿವೆಗೆ ಉರುಳಿದಾಗ ದಿಢೀರ್ ಪ್ರವಾಹ ಸೃಷ್ಟಿಯಾಗಿದೆಂದು ಹೇಳಿದ್ದಾರೆ.

# ವೈಯಕ್ತಿಕ ದ್ವೇಷ: ಜಾತಿ ಪ್ರಮಾಣ ಪತ್ರ ನೀಡಲು ನಿರಾಕರಣೆ

• ಪ್ರಜೋದಯ ವರದಿ




**ಹಾಸನ:** ವೈಯಕ್ತಿಕ ದ್ವೇಷದಿಂದ ಬೇಲೂರು ತಹಶೀಲ್ದಾರ್ ಜಾತಿ ಪ್ರಮಾಣ ಪತ್ರ ನೀಡಲು ನಿರಾಕರಿಸಿರುವುದರಿಂದ ಯಾವುದೇ ಸರ್ಕಾರಿ ಹುದ್ದೆಗೂ ಅರ್ಜಿ ಸಲ್ಲಿಸಲು ಆಗುತ್ತಿಲ್ಲ ಎಂದು ಬೇಲೂರು ತಾಲ್ಲೂಕಿನ ಕಬ್ಬಿನ ಮನೆ ಗ್ರಾಮದ ಯುವಕ ಕೆ.ಪಿ. ಸಂತೋಷ್ ಕುಮಾರ್ ಅವರು ಆರೋಪಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾನು ಈ ಹಿಂದಿನ ತಹಶೀಲ್ದಾರ್ ಮಮತಾ ಅವರ ಕಾರು ಚಾಲಕನಾಗಿ ಕೆಲಸ ನಿರ್ವಹಿಸುತ್ತಿದ್ದೆ. ಆ ಅವಧಿಯ 10 ತಿಂಗಳ ಸಂಬಳ ನೀಡದೆ ಇರುವುದನ್ನು ಪ್ರಶ್ನೆ ಮಾಡಿದಕ್ಕೆ ಅಗತ್ಯ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಿದ್ದರೂ ದುರುದ್ದೇಶದಿಂದ ಅರ್ಜಿ ತಿರಸ್ಕರಿಸಿದ್ದಾರೆಂದು ದೂರಿದರು.

ನಾನು ಪರಿಶಿಷ್ಟ ಜಾತಿಯ ಆದಿ ಕರ್ನಾಟಕ ಹೊಲೆಯ ಸಮುದಾಯಕ್ಕೆ ಸೇರಿದ್ದು, ರಾಜ್ಯ ಸರ್ಕಾರ ಹಾಗು ವಿವಿಧ ನ್ಯಾಯಾಲಯಗಳಿಂದ ಆಹ್ವಾನಿಸಲಾಗಿರುವ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಜಾತಿ ಪ್ರಮಾಣ ಪತ್ರದ ಅಗತ್ಯವಿದೆ. ಗ್ರಾಮ ಆಡಳಿತಾಧಿಕಾರಿ, ಸಿವಿಲ್ ಪೊಲೀಸ್ ಕಾನ್ಸ್‌ಟೇಬಲ್ ಸೇರಿ ವಿವಿಧ ಹುದ್ದೆ ಹಾಗು ವಿವಿಧ ನ್ಯಾಯಾಲಯಗಳ ನೇಮಕಾತಿಗಳಿಗೆ ಹೊಸದಾಗಿ ಜಾರಿಯಾಗಿರುವ ಪರಿಶಿಷ್ಟ ಜಾತಿಗಳ ಒಳ ಮೀಸಲಾತಿ ವರ್ಗೀಕರಣದ ಪ್ರಕಾರ ಜಾತಿ ಪ್ರಮಾಣ ಪತ್ರ ಅಗತ್ಯವಿದೆ. ಈ ಹಿನ್ನಲೆ ಬೇಲೂರು ತಾಲ್ಲೂಕು ಕಚೇರಿಗೆ ಕಸಬಾ ನಾಡ ಕಚೇರಿ ಮೂಲಕ ಜಾತಿ ಪ್ರಮಾಣ ಪತ್ರಕ್ಕಾಗಿ ಕಳೆದ ಜೂ.12, ಜು.3 ರಂದು ಅರ್ಜಿ ಸಲ್ಲಿಸಿದ್ದೇನೆ. ಅರ್ಜಿಯೊಂದಿಗೆ ತಮ್ಮ ಮೂಲ ಶಾಲಾ ವ್ಯಾಸಂಗ ಪ್ರಮಾಣ ಪತ್ರ, ನಮೂನೆ-1ರ ನೋಟರಿ ಅಫಿಡವಿಟ್, ಆಧಾರ್ ಕಾರ್ಡ್ ಸೇರಿ, ಗ್ರಾಮ ಲೆಕ್ಕಾಧಿಕಾರಿ, ಕಂದಾಯ ನಿರೀಕ್ಷಕರ ವರದಿ ಹಾಗು ಗ್ರಾಮಸ್ಥರ ಮಹಜರು ವರದಿ ದಾಖಲೆಯನ್ನೂ ಸಲ್ಲಿಸಲಾಗಿದೆ. ಆದರೆ, ತಹಶೀಲ್ದಾರ್ 21 ದಿನಗಳ ಕಾಲ ಕಾಯಿಸಿ ನಂತರ ಅರ್ಜಿ ತಿರಸ್ಕರಿಸಿದ್ದಾರೆಂದು ದೂರಿದರು.

ಆ.25 ರಂದು ಸ್ವತಃ ತಹಶೀಲ್ದಾರ್ ಅವರನ್ನೇ ಭೇಟಿ ಮಾಡಿದಾಗ ಅರ್ಜಿ ಪ್ರತಿ ಎಸೆದು ಅವಮಾನಿಸಿದರು. ನೀನು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡಿದ್ದೀಯ. ನಿನಗೆ ಜಾತಿ ಪ್ರಮಾಣ ಪತ್ರ ನೀಡುವುದಿಲ್ಲ. ನೀನು ಎಲ್ಲಿಗೆ ಹೋಗುತ್ತೀಯಾ ಹೋಗು, ಏನು ಬೇಕಾದರೂ ಮಾಡು ಎಂದು ನಿಂದಿಸಿದ್ದಾರೆ. ನಾನು ಕ್ರಿಶ್ಚಿಯನ್ ಧರ್ಮಕ್ಕೆ ಸೇರಿದ್ದರೆ ನನಗೆ ಆ ಪ್ರಮಾಣ ಪತ್ರವನ್ನೇ ನೀಡಲೆಂದು ಒತ್ತಾಯಿಸಿದರು.

ಪತ್ರಕರ್ತ ಹೆತ್ತೂರು ನಾಗರಾಜ್ ಅವರು ಮಾತನಾಡಿ, ದಲಿತ ಯುವಕನಿಗೆ ಕಿರುಕುಳ ನೀಡಿ ದೌರ್ಜನ್ಯ ಎಸಗಿರುವ ತಹಶೀಲ್ದಾರ್ ಅವರನ್ನು ಕೂಡಲೇ ಅಮಾನತು ಮಾಡಬೇಕು. ಆಗಿರುವ ಅನ್ಯಾಯ ಸರಿಪಡಿಸಬೇಕು. ಈ ಸಂಬಂಧ ಈಗಾಗಲೇ ಉಪವಿಭಾಗಾಧಿಕಾರಿಗೆ ಮೇಲ್ಮನವಿ ಸಲ್ಲಿಸಲಾಗಿದೆ. ಜಿಲ್ಲಾಧಿಕಾರಿ ಕೂಡಲೇ ಮಧ್ಯೆ ಪ್ರವೇಶಿಸಿ ತಪ್ಪು ಮಾಡಿರುವ ಅಧಿಕಾರಿ ವಿರುದ್ಧ ಕ್ರಮ ಜರುಗಿಸಬೇಕು. ನೊಂದಿರುವ ದಲಿತ ಯುವಕನಿಗೆ ನ್ಯಾಯ ಕೊಡಿಸ ಬೇಕು. ಇಲ್ಲದಿದ್ದರೆ ಎಲ್ಲಾ ದಲಿತ ಮುಖಂಡರು, ಸಂಘಟನೆಗಳ ಒಳಗೂಡಿ ಬೇಲೂರು ತಹಶೀಲ್ದಾರ್ ಕಚೇರಿ ಎದುರು ಸೋಮವಾರದಿಂದಲೇ ಪ್ರತಿಭಟನೆ ಮಾಡುವುದಾಗಿ ಎಚ್ಚರಿಕೆ ನೀಡಿದರು.

ಈ ಸಂಬಂಧ ಈಗಾಗಲೇ ರಾಜ್ಯ ಎಸ್‌ಸಿ-ಎಸ್‌ಟಿ ಘಟಕಕ್ಕೂ ಪತ್ರ ಬರೆಯಲಾಗಿದೆ. ಜಾತಿ ಪ್ರಮಾಣ ಪತ್ರ ಪಡೆಯಲು ಬೇಕಾದ ಎಲ್ಲಾ ದಾಖಲೆಗಳನ್ನು ಸಂತೋಷ್ ಕುಮಾರ್ ನೀಡಿದ್ದರೂ, ತಹಶೀಲ್ದಾರ್ ತಿರಸ್ಕಾರ ಮಾಡಿದ್ದಾರೆ. ಈ ಮೂಲಕ ಯುವಕನ ಭವಿಷ್ಯಕ್ಕೆ ಕಲ್ಲು ಹಾಕಿದ್ದಾರೆಂದು ದೂರಿದರು. ಪ್ರಕಾಶ್, ಮರಿಜೋಸೆಫ್, ರವಿ, ಶಿವಣ್ಣ ಇದ್ದರು.

## ಏಷ್ಯನ್ ಕ್ರೀಡಾಕೂಟ: ಸೆ.28ಕ್ಕೆ ಶ್ರೇಯಸ್ ಪಡೆ ಕಣಕ್ಕೆ

• ಪ್ರಜೋದಯ ವರದಿ



**ನವದೆಹಲಿ:** ಶ್ರೇಯಸ್ ಅಯ್ಯರ್ ನಾಯಕತ್ವದ ಭಾರತ ಕ್ರಿಕೆಟ್ ತಂಡವು ಜಪಾನ್‌ನಲ್ಲಿ ನಡೆಯಲಿರುವ ಏಷ್ಯನ್ ಕ್ರೀಡಾಕೂಟದಲ್ಲಿ ಸೆಪ್ಟೆಂಬರ್ 28ರಂದು ಕಣಕ್ಕಿಳಿಯಲಿದೆ. ಮಹಿಳಾ ತಂಡವು ಸೆ.18ರಂದು ಆತಿಥೇಯ ತಂಡದ ವಿರುದ್ಧ ಅಭಿಯಾನ ಆರಂಭಿಸಲಿದೆ.

ಭಾರತ ಪುರುಷ ಮತ್ತು ಮಹಿಳಾ ತಂಡಗಳು ನೇರವಾಗಿ ಕ್ವಾರ್ಟರ್ ಫೈನಲ್‌ನಲ್ಲಿ ಆಡಲಿವೆ. ಮಹಿಳಾ ವಿಭಾಗದಲ್ಲಿ ಎಂಟು ತಂಡಗಳು ಸ್ಪರ್ಧಿಸಲಿವೆ. ಪುರುಷರ ವಿಭಾಗದ ಎ ಗುಂಪಿನಲ್ಲಿ ಅಫ್ಘಾನಿಸ್ತಾನ, ಜಪಾನ್ ಮತ್ತು ನೇಪಾಳ ತಂಡಗಳಿವೆ. ಅಂಕಪಟ್ಟಿಯಲ್ಲಿ 2ನೇ ಸ್ಥಾನ ಪಡೆಯುವ ತಂಡವು ಎಂಟರ ಘಟ್ಟದಲ್ಲಿ ಭಾರತವನ್ನು ಎದುರಿಸಲಿದೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019